ISSN: 2454-5813
Impact Factor: RJIF 4.89
Volume 6 Issue 1 2020
Months: Jan - Mar

Printed Journal
Indexed Journal
Refereed Journal
Peer Reviewed Journal

# International Journal of Kannada Research



Tirupati Journals Solutions
New Delhi, India

5/3/2020

M.G.V.C. Arts, Commerce & Science College MUDDEBIHAL -586212 Dt: Vijayapur.

# International Journal of Kannada Research

ISSN Number: **2454-5813**

Volume 6 Issue 1 Jan - Mar 2020

**Published By**
**Tirupati Journal Solutions**
House No: 169, Pocket C-11, Sector-3,
Rohini, New Delhi, India
Mob: +91-9711224068

Google Scholar

INTERNATIONAL
STANDARD
SERIAL
NUMBER

*Co-ordinator,*
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

PRINCIPAL,
M. G. V. C. Arts, Com. & Science College
MUDDEBIHAL - 586212.

Year: **2020**, Volume: **6**, Issue: **1**
ISSN: 2454-5813
Impact Factor: **Impact Factor: RJIF 4.89**
Online Available at **www.kannadajournal.com**

# International Journal of Kannada Research

**Index for 2020 (Vol - 6, Issue - 1) Part - A**

01. ಬಾಗಲಕೋಟೆ ಜಿಲ್ಲೆಯ ಮಠಮಾನ್ಯಗಳು
**Authored by:** ಡಾ. ಪ್ರ ಕಾಶ ಎನ್. ನರಗುಂದ
**Page:** 01-10

02. ಭರತನಾಟ್ಯ ಮತ್ತು ಆದಿಪುರಾಣದಲ್ಲಿ ವಿಪ್ರಲಂಭ ಶೃಂಗಾರದ ಅಭಿವ್ಯಕ್ತತೆ
**Authored by:** ಅರುಣ ಕೆ.ಆರ್, ಪ್ರೊ. ಡಾ. ರೇಖಾ ಜೈನ್
**Page:** 11-14

03. ಸವದತ್ತಿ ಪ್ರದೇಶದಲ್ಲಿ ಆಯ್ದ ರಾಷ್ಟ್ರಕೂಟರ ಜೈನ ಶಾಸನಗಳು
**Authored by:** ಹಣಮಂತ ವಿಠ್ಠಲ ಸರಿಕರ, ಡಾ. ಎಸ್. ಜಿ ಚಲವಾದಿ
**Page:** 15-17

04. ಯಾದಗಿರಿ ಜಿಲ್ಲೆಯ ಜಾತ್ರೆಗಳ ಜನಪದ ಪ್ರದರ್ಶನ ಕಲೆಗಳು
**Authored by:** ಸಂತೋಷ ಕುಮಾರ ರಾಮರೆಡ್ಡಿ, ಡಾ.ಜಗನ್ನಾಥ ಹೆಬ್ಬಾಳ
**Page:** 18-23

05. ಕರ್ನಾಟಕದ ರಾಜ್ಯದಲ್ಲಿ ಕುರುಬ ಸಮುದಾಯ
**Authored by:** ರಂಗಸ್ವಾಮಿ ಕೆ, ಡಾ. ಎಂ ಕೆ ದೇವಪ್ಪ
**Page:** 24-27

06. ತಮಿಳು ಪ್ರಾಚೀನ ಜನಪದ ಸಾಹಿತ್ಯದಲ್ಲಿ ಮಾತೃದೇವತ ಆಚರಣೆಯ ಕುರುಹು
**Authored by:** ಮಂಜುನಾಥ.ಆರ್.
**Page:** 28-30

07. ಮುಂಡಗೋಡ ತಾಲೂಕಿನ ವೀರಗಲ್ಲುಗಳಲ್ಲಿ ಆಯುಧಗಳು
**Authored by:** ಶಾಭೋದ್ದೀನ.ಎಮ್.ಮುಗಳಿಕಟ್ಟ, ಡಾ. ವಾಮದೇವ ಹೆಚ್. ಟಿ
**Page:** 31-34

08. ಲಂಬಾಣಿ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ನೆಲೆಗಳು
**Authored by:** ವೀಣಾ ಎಲ್.ವೈ, ಡಾ. ಎಸ್. ಬಿ. ರಾಠೋಡ
**Page:** 35-38

09. ಕನ್ನಡ ಸಾಹಿತ್ಯದಲ್ಲಿ ಜನಪದ ಹಾಡುಗಳ ಮಹತ್ವ ಮತ್ತು ಅಗತ್ಯತೆ
**Authored by:** ಮಂಜು.ಜಿ
**Page:** 39-42

10. ಕನಕದಾಸರ ದೃಷ್ಟಿಯಲ್ಲಿ ಮೌಲ್ಯಗಳು
**Authored by:** ವಿರೇಶ ಅಮರಯ್ಯ, ಡಾ. ಬಿ ಮಹಾದೇವಯ್ಯ
**Page:** 43-46

*Co-ordinator,*
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

**PRINCIPAL,**
**M. G. V. C. Arts, Com. & Science College**
**MUDDEBIHAL - 586212.**

International Journal of Kannada Research 2020; 6(1): 01-10

International Journal of Kannada Research
www.kannadajournal.com

ISSN: 2454–5813
IJKR 2020; 6(1): 01-10
© 2020 IJKR
www.kannadajournal.com
Received: 01-11-2019
Accepted: 03-12-2019

ಡಾ. ಪ್ರ ಕಾಶ ಎನ್. ನರಗುಂದ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಎಂ.ಜಿ.ವಿ.ಸಿ. ಕಲಾ ವಾಣಿಜ್ಯ ಮತ್ತು
ವಿಜ್ಞಾನ ಪದವಿ ಮಹಾವಿದ್ಯಾಲಯ
ಮುದ್ದೇಬಿಹಾಳ ವಿಜಯಪುರ ಜಿಲ್ಲೆ

**Corresponding Author:**
ಡಾ. ಪ್ರ ಕಾಶ ಎನ್. ನರಗುಂದ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಎಂ.ಜಿ.ವಿ.ಸಿ. ಕಲಾ ವಾಣಿಜ್ಯ ಮತ್ತು
ವಿಜ್ಞಾನ ಪದವಿ ಮಹಾವಿದ್ಯಾಲಯ
ಮುದ್ದೇಬಿಹಾಳ ವಿಜಯಪುರ ಜಿಲ್ಲೆ

# ಬಾಗಲಕೋಟೆ ಜಿಲ್ಲೆಯ ಮಠಮಾನ್ಯಗಳು

**ಡಾ. ಪ್ರ ಕಾಶ ಎನ್. ನರಗುಂದ**

ಬಾಗಲಕೋಟ ಜಿಲ್ಲೆಯು ಸಾಂಸ್ಕೃತಿಕ ರಂಗದಲ್ಲಿ ಹೆಸರುವಾಸಿಯಾಗಿದೆ. ಇಲ್ಲಿನ ನೆಲ, ಜಲ, ಭಾಷೆ, ವೇಷ–ಭೂಷಣ ಪ್ರತಿಯೊಂದರಲ್ಲಿ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಬಾಗಲಕೋಟೆ, ಬೀಳಗಿ, ಜಮಖಂಡಿ, ಮುಧೋಳ, ಹುನಗುಂದ ಬಾದಾಮಿ ಸ್ಥಳಗಳು ತಾಲೂಕ ಕೇಂದ್ರಗಳಾಗಿ ಹೊರಹೊಮ್ಮಿವೆ. ಇಲ್ಲಿನ ಬೂಉತ್ಪನ್ನಗಳು, ಸ್ಮಾರಕಗಳು, ಕಲೆ ಮತ್ತು ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ ಹಲವಾರು ಕ್ಷೇತ್ರಗಳಲ್ಲಿ ಜಗತ್ತಿಗೆ ಹೆಸರುವಾಸಿಯಾಗಿದೆ. ಇಲ್ಲಿನ ಮಲಪ್ರಭೆ, ಘಟಪ್ರಭೆ, ಕೃಷ್ಣ ನದಿಗಳು ಇಲ್ಲಿನ ಜನರಿಗೆ ವರದಾನಗಳಾಗಿವೆ. ಇಂತಹ ಐತಿಹಾಸಿಕ ಸಾಂಸ್ಕೃತಿಕ ಜಿಲ್ಲೆಯಲ್ಲಿ ಹಲವಾರೂ ಮಠಗಳನ್ನು ಕಾಣಬಹುದಾಗಿವೆ. ಹನ್ನೇರಡನೇ ಶತಮಾನದ ಆಚೆಯಲ್ಲಿ ಒಟ್ಟು 312 ಮಠಗಳಿದವೆಂಬುದು ಮಾಹಿತಿ ದೊರೆತಿದೆ. ಅದರಲ್ಲಿ 88 ಮಠಗಳು ಅಸ್ತಿತ್ವದಲ್ಲಿ ಉಳಿದಿವೆ. ಸುಮಾರು 78 ಮಠಗಳು ಸಕ್ರೀಯವಾಗಿ ಕಾರ್ಯೋನ್ಮುಖವಾಗಿವೆ. 20 ಮಠಗಳು ಸ್ವಾಮಿಜಿಗಳಿಲ್ಲದೇ ಕೇವಲ ಗದ್ದುಗೆ ಪೂಜೆಯನ್ನು ಮಾಡುತ್ತಾರೆ. ಉಳಿದ ಜಿಲ್ಲೆಯಲ್ಲಿ 327 ಮಠಗಳ ಹೆಸರುಗಳು ನಾಮಕಾವಸ್ಥೆಯಾಗಿವೆ.

## ಹುನಗುಂದ ತಾಲೂಕ

ಪ್ರವಾಸಿಗರನ್ನು ಕೈಬೀಸಿ ಕರೆಯುವ ಸುಂದರ ಕ್ಷೇತ್ರಗಳನ್ನು ಈ ತಾಲೂಕು ಹೊಂದಿದೆ. ಇಲ್ಲಿ ಬಸವಣ್ಣನು ಐಕ್ಯವಾದ ಸ್ಥಳ ಕೂಡಲ ಸಂಗಮವು ವಿಶ್ವಕ್ಕೆ ಮಾದರಿಯಾಗಿದೆ. ತಾಲೂಕಿನ ವ್ಯಾಪ್ತಿಯಲ್ಲಿ ಸುಮಾರು 52 ಮಠಗಳು ಸ್ಥಾಪನೆಯಾಗಿ 10 ಮಠಗಳಲ್ಲಿ ನಿರಂತರವಾದ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ.

## ಇಲಕಲ್ಲ

ಮಹಿಳೆಯರ ಸೀರೆಗಳಿಗೆ ಹಾಗೂ ಗ್ರಾನೈಟ್‌ಗಳಿಗೆ ಇಲಕಲ್ಲ ಹೆಸರುವಾಸಿಯಾಗಿದ್ದು ಇಂತಹ ಸ್ಥಳದಲ್ಲಿ ಶ್ರೀ ಚಿತ್ತರಗಿ ವಿಜಯಮಹಾಂತೇಶ ಮಠವು ಸಾಹಿತ್ಯಿಕವಾಗಿ ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಪ್ರಖ್ಯಾತಿಯನ್ನು ಪಡೆದುಕೊಂಡಿದೆ. ಸೂನ್ಯಸಿಂಹಾಸನದ ಅಧ್ಯಕ್ಷರಾದ ಅಲ್ಲಮಪ್ರಭುಗಳು ಕಲ್ಯಾಣಕ್ಕೆ ಹೊಗುವಾಗ ಚಿತ್ತರಗಿಯಲ್ಲಿ ಕೆಲ ದಿನಗಳು ನೆಲೆ ನಿಂತು ಹೋಗುವ ಸಂದರ್ಭದಲ್ಲಿ ಶ್ರೀ ವಿಜಯ ಮಹಾಂತೇಶ ಸ್ವಾಮಿಗಳನ್ನು ಮಠಕ್ಕೆ ನೇಮಿಸಿ ಮುಂದೆ ಹೋಗಿದ್ದರೆಂದು "ವಿಜಯ ಮಹಾಂತೇಶ ಲೀಲಾಮೃತ" ಪುರಾಣದಲ್ಲಿ ದಾಖಲಿಸಿದ್ದಾರೆ ಹಾಗೆ ತೋಂಟದ ಶ್ರೀ ಸಿದ್ದಲಿಂಗ ಸ್ವಾಮಿಗಳು ತಮ್ಮ ಶಿಷ್ಯರಾದ ಶ್ರೀ ವಿಜಯ ಮಹಾಂತೇಶ ಎಂಬುವರಿಗೆ ಪಟ್ಟಾಧೀಕಾರ ನೀಡಿದ್ದರೆಂದು ಉಲ್ಲೇಖಿಸಿದ್ದಾರೆ. ಅಂದರೆ ಹನ್ನೇರಡನೇ ಶತಮಾನದಲ್ಲಿ ಈ ಮಠವು ಪ್ರಾರಂಭಗೊಂಡಿರಬಹುದು. ಮಠದ ಪರಂಪರೆಯು 15ನೇ ಶತಮಾನದಲ್ಲಿ ಶ್ರೀ ಮ.ನಿ.ಪ್ರ. ವಿಜಯ ಮಹಾಂತಸ್ವಾಮಿಗಳಿಂದ ಹಿಡಿದು ಇಂದಿನ ಡಾ. ಶ್ರೀಮ.ನಿ.ಪ್ರ ಮಹಾಂತ ಸ್ವಾಮಿಗಳು ಹಾಗೂ ಗುರುಮಹಾಂತ ಸ್ವಾಮಿಗಳವರೆಗೆ, ಹತ್ತೊಂಬತ್ತು ಮಹಾಸ್ವಾಮಿಗಳು ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಹಲವಾರು ಕ್ಷೇತ್ರಗಳಲ್ಲಿ ಮಠದ ಶ್ರಯೋಭಿವೃದ್ಧಿಗೆ ದುಡಿದವರು, ಶ್ರೀ ಮಠದ ಸ್ವಾಮಿಗಳು ಹಲವಾರೂ ಮೂಢನಂಬಿಕೆಗಳನ್ನು ವಿರೋಧಿಸಿದರು. ಇದರ ಬಗ್ಗೆ ಹಲವಾರು ಸ್ಥಳಗಳಿಗೆ ಸ್ವತಃ ಹೋಗಿ ಪ್ರಜ್ಞೆಯನ್ನು ಮೂಡಿಸಿದರು. ನಾಗರಪಂಚಮಿ ದಿನ ಹುತ್ತಕ್ಕೆ ಹಾಲು ಹಾಕದೇ ಬಡವರಿಗೆ ಅನ್ನದ ಸಂತರ್ಪಣೆ, ರೋಗಿಗಳಿಗೆ ಹಾಲು, ಹಂಪಲಕೊಡುವ ಪ್ರಕ್ರಿಯೆಯನ್ನು ರೂಢಿಸಿದರು. ಶ್ರೀ ಮಠದಲ್ಲಿ ನಿರಂತರ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತವೆ. ಬಸವಣ್ಣನ ಅಧಿಕಾರ ಅವಧಿಯಲ್ಲಿ ಜಾತಿ ಸಂಕೇತಗಳನ್ನು ಕಿತ್ತು ಹಾಕಲು ಹೇಗೆ



Co-ordinator,
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

ಶ್ರಮಿಸಿದರೂ ಹಾಗೆ ಶ್ರೀಗಳು ಹಿಂದುಳಿದ ವರ್ಗದ ಸಂಸ್ಕಾರವಂತ ವಟುವನ್ನು ತೆಗೆದುಕೊಂಡು ಹಲವಾರು ಶಾಖಾಮಠಗಳಿಗೆ ಉತ್ತರಾಧಿಕಾರಿಗಳನ್ನಾಗಿ ಮಾಡಿದ್ದಾರೆ. ಜೊತೆಗೆ ಹಲವಾರು ಜನರಿಗೆ ವ್ಯಸನ ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಮಹಾಂತ ಜೋಳಿಗೆಯನ್ನು ಹಿಡಿದು ತಾವುಗಳು ಮಾಡುವ ಎಲ್ಲಾ ಚಟಗಳನ್ನು ಈ ಜೋಳಿಗೆಯಲ್ಲಿ ಹಾಕಿರಿ ಎಂದು ಕಾಲ್‌ನಡಿಗೆಯಲ್ಲಿಯೇ ಹಲವಾರೂ ಹಳ್ಳಿ–ಹಳ್ಳಿಗಳಿಗೆ ಹೋದ ಉದಾಹರಣೆಗಳು ಕಾಣಬಹುದಾಗಿದೆ. ಈ ಮಠದ ಆಶ್ರಯದಲ್ಲಿ ಹಲವಾರು ಬ್ಯಾಂಕುಗಳು, ಶೈಕ್ಷಣಿಕ ಸಂಘ–ಸಂಸ್ಥೆಗಳು, ಮುದ್ರಣಾಲಯ ಮುಂತಾದವುಗಳು ಪ್ರಾರಂಭವಾಗಿ ಇಂದು ಮಠವು ಹೆಮ್ಮರವಾಗಿ ಬೆಳೆದು ನಿಂತಿದೆ.

**ಕಮತಗಿ**

ಮಲಪ್ರಭೆಯ ದಡದಲ್ಲಿ ನೆಲೆಗೊಂಡ 'ಕಮತಗಿ' ಪಟ್ಟಸಾಲಿ ನೇಕಾರಿಕೆಗೆ ಹೆಚ್ಚು ಪ್ರಸಿದ್ಧಿಯನ್ನ ಪಡೆದುಕೊಂಡಿದೆ. ಇಲ್ಲಿ ಪುರಾತನದ ಕಾಲದ ಶ್ರೀ ಹೊಳೆಹುಚ್ಚೇಶ್ವರ ಸಂಸ್ಥಾನ ಮಠವು ಅಸ್ತಿತ್ವದಲ್ಲಿದೆ . ಒಂದು ಮಠವು ಊರ ಹೊರಗಡೆ ಇರುವ ಗುಡ್ಡದಲ್ಲಿದ್ದರೆ ಇನ್ನೊಂದು ಊರ ಒಳಗೆ ಬಸ್‌ಸ್ಟ್ಯಾಂಡ್ ಹತ್ತಿರ ಕಾಣಬಹುದಾಗಿದೆ. ಮೊದಲು ಕಲ್ಯಾಣದ ಶ್ರೀ ಮರುಳಶಂಕರ ದೇವರು ಇಲ್ಲಿ ಬಂದು ನೆಲೆಸಿ ಈ ಮಠವನ್ನು ಸ್ಥಾಪಿಸಿದ್ದಾರೆಂದು ತಿಳಿದು ಬರುತ್ತದೆ. ಸುಮಾರು ಹನ್ನೇರಡನೇ ಶತಮಾನದಿಂದ ಹಿಡಿದು ಹದಿನೈದನೇ ಶತಮಾನದವರೆಗೆ ಮಠದ ಪಿಠಾಧ್ಯಕ್ಷರಿಲ್ಲದೆ ಇದ್ದ ಸಂದರ್ಭದಲ್ಲಿ ಶ್ರೀ ಹೊಳೆಹುಚ್ಚೇಶ್ವರರು ಆಧ್ಯಾತ್ಮದ ಹುಚ್ಚಿನಿಂದ ಪಾದಯಾತ್ರೆಯನ್ನು ಮಾಡಿ ಜನರ ಮೌಢ್ಯವನ್ನು ಹೋಗಲಾಡಿಸಿದರು. ಕೆಲವು ಜನರು ಅಪಹಾಸ್ಯಮಾಡಿದರು. ಆಧ್ಯಾತ್ಮಿಕ ಹುಚ್ಚನ್ನು ಶ್ರೀಗಳು ಮೈಗೂಡಿಸಿಕೊಂಡಿದ್ದರಿಂದ ಜನರು ಶ್ರೀ ಹುಚ್ಚೇಶ್ವರ ಸ್ವಾಮಿಗಳೆಂದು ಕರೆಯತೊಡಗಿದರು. ತದನಂತರದಲ್ಲಿ 'ಶ್ರೀ ಹುಚ್ಚೇಶ್ವರ ಮಠ' ಎಂಬುದಾಗಿ ಕರೆಯತೊಡಗಿದರು. ಈ ಮಠಕ್ಕೆ ಅಧಿಕಾರ ವಹಿಸಿಕೊಂಡ ಸ್ವಾಮಿಜಿಗಳು ಶ್ರೀ ಹುಚ್ಚೇಶ್ವರ ಸ್ವಾಮಿಗಳೆಂದು ಕರೆಯತೊಡಗಿದರು. ಈ ಮಠದ ಪರಂಪರೆಯು ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಹೆಸರುವಾಸಿಯಾಗಿದೆ. ಸುಮಾರು ಹದಿನಾಲ್ಕು ಶಾಖಾಮಠಗಳನ್ನು ಕಾಣಬಹುದಾಗಿವೆ. ಪ್ರತಿಯೊಂದು ಮಠಗಳಲ್ಲಿ ಅನ್ನದಾಸೋಹ, ಶೈಕ್ಷಣಿಕ ಸೇವೆ ನಿರಂತರವಾಗಿ ನಡೆಯುತ್ತಾ ಬಂದಿದೆ.

**ಹಿರೇಮಠ**

ಕಮತಗಿಯ ಮಧ್ಯಭಾಗದಲ್ಲಿ ಈ ಮಠವನ್ನು ಕಾಣಬಹುದಾಗಿದೆ. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರೆಂದು ತಿಳಿದು ಬರುತ್ತದೆ. ಮೊದಲು ಉತ್ತರಾಧಿಕಾರಿಗಳಲ್ಲದೆ ಮಠವನ್ನು ನಡೆಸುತ್ತಾ ಬಂದು ಶ್ರೀ ಶಿವಕುಮಾರ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಇವರು ಉಜ್ಜಯನಿ ಹಾಗೂ ರಂಭಾಪುರಿ ಪೀಠಗಳಲ್ಲಿ ವೇದ ಅಧ್ಯಯನ ಮಾಡಿ ಜನರಿಗೆ ಮಾದರಿಯಾದರು. ಇಲ್ಲಿ ಶ್ರೀ ಚನ್ನಬಸವಯ್ಯ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಕಾಣಬಹುದಾಗಿದೆ.

**ಕೂಡಲಸಂಗಮ**

ಹನ್ನೇರಡನೆ ಶತಮಾನದ ಪೂರ್ವದಲ್ಲಿ ಈ ಕ್ಷೇತ್ರವು ಇದ್ದಿತ್ತೆಂದು ತಿಳಿದು ಬರುತ್ತದೆ. ವೈದಿಕ ಸಂಪ್ರದಾಯದ ವಿರುದ್ಧ ಬಂಡೆದ್ದು ಶ್ರೀ ಜಾತವೇದ ಮುನಿಗಳ ಕೃಪಾಕಟಾಕ್ಷದಿಂದ ಕ್ಷೇತ್ರವು ಆಧ್ಯಾತ್ಮಕ ತಿರುವು ಪಡೆದುಕೊಡಿತು. ನಂತರ ವಿಶ್ವವಿಖ್ಯಾತಿಯನ್ನು ಪಡೆಯಲು ಬಸವಣ್ಣನವರ ಪಾತ್ರ ಹಿರಿದಾದರು. ಬಾಲ್ಯದಿಂದ ಹಿಡಿದು ಐಕ್ಯದವರೆಗೊ ಈ ಕ್ಷೇತ್ರ ಬಸವಣ್ಣನಗೆ ಒಂದು ವರದಾನವಾಗಿ ರೂಪವಾಯಿತು. ಸಂಗಮನಾಥ ದೇವಾಲಯವು ಅತಿ ಪ್ರಖ್ಯಾತಿಯನ್ನು ಪಡೆದುಕೊಂಡಿದೆ.

**ಸಾರಂಗಮಠ**

ಶ್ರೀಮಠವು ಉಜ್ಜಯನಿ ಪೀಠದ ಶಾಖಾಮಠವಾಗಿವಾಗಿ ಹೊರ ಹೊಮ್ಮಿದೆ. ಶ್ರೀ ಸಾರಂಗಮುನಿ ಶಿವಾಚಾರ್ಯ ಸ್ವಾಮಿಗಳಿಂದ ಈ ಮಠವು ಪ್ರಾರಂಭಗೊಂಡು ಅನೇಕ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ನಿತ್ಯ ಜರುಗುತ್ತವೆ. ಇದೇ ಸಂದರ್ಭದಲ್ಲಿ ಬಸವಣ್ಣನವರು ಕಲ್ಯಾಣದಿಂದ ಕೂಡಲಸಂಗಮಕ್ಕೆ ಹಲವಾರು ಸಾಂಸ್ಕೃತಿಕ, ಧಾರ್ಮಿಕ ವಿಚಾರ ವಿನಿಯೊಗದಲ್ಲಿ ಪಾಲ್ಗೊಂಡು ಜಾತವೇದಮುನಿಗಳ ಮಾರ್ಗದರ್ಶನದಲ್ಲಿ ವಚನ ಸಾಹಿತ್ಯ ನಿರ್ಮಾಣ ಮಾಡಲು ಮುಂದಾದರು. ಕೂಡಲಸಂಗಮದಲ್ಲಿ ಇಂದು ಪ್ರವಾಸಿಗರು ನಿತ್ಯ ಸಂಗಮನಾಥನ ದರ್ಶನ ಪಡೆಯಲು ಸಾಲುಗಟ್ಟಿ ನಿಂತಿರುತ್ತಾರೆ. ನಿತ್ಯ ಅಭಿಷೇಕ, ದಾಸೋಹ, ಬಡಮಕ್ಕಳಿಗೆ ಶಿಕ್ಷಣ ನೀಡುವುದು ಶರಣರ ಮೇಳ ಹಲವಾರೂ ಪ್ರಶಸ್ತಿಗಳನ್ನು ಈ ಕ್ಷೇತ್ರಗಳಿಂದ ಸಾಧಕರಿಗೆ ನೀಡುತ್ತಾ ಬಂದಿರುತ್ತಾರೆ.

**ಪಂಚಮಸಾಲಿ ಪೀಠ**

ಇತ್ತೀಚಿನ ವರುಷಗಳಲ್ಲಿ ಕೂಡಲಸಂಗಮದಲ್ಲಿ ಪಂಚಮಸಾಲಿ ಸಮಾಜದ 'ಪಂಚಮಸಾಲಿ ಪೀಠ' ಸ್ಥಾಪಿಸಲ್ಪಟ್ಟಿದೆ. ಇದರ ಪ್ರಥಮ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಅದರಲ್ಲೂ ಬಸವ ಧರ್ಮವನ್ನು ದೇಶ–ವಿದೇಶಗಳಲ್ಲಿ ಪ್ರಚಾರ ಮಾಡಿ ಇಷ್ಟಲಿಂಗದ ಮಹತ್ವವನ್ನು ತಿಳಿಪಡಿಸುವದರ ಜೊತೆಗೆ ರೈತರ ಪರ ಹೋರಾಟ ಮಾಡುತ್ತ ಸಮಾಜಮುಖಿಯಾಗಿದ್ದಾರೆ.

**ಗುಡೂರ**

ಗುಡೂರ ಪಟ್ಟಣವು ವ್ಯಾಪಾರಕ್ಕೆ ಹೆಸರು ವಾಸಿಯಾಗಿದ್ದು, ಸಾಂಸ್ಕೃತಿಕ ರಂಗದಲ್ಲಿ ಗಮನಾರ್ಹ ಸಾಧನೆಯನ್ನು ಮಾಡಿದೆ. ಇಲ್ಲಿ ಹಿರೇಮಠವು ಭಕ್ತರ ಪಾಲಿನ ವರದಾನವಾಗಿದೆ.

**ಹಿರೇಮಠ**

ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಕ್ರಿ.ಶ.1975ರಲ್ಲಿ ಇಲ್ಲಿ ಬಂದು ನೆಲಸಿ ಮಠದ ಪರಂಪರೆಯನ್ನು ಇವರು ಹೆಚ್ಚಿಸುತ್ತಾ ಹಲವಾರೂ ಕೃತಿಗಳನ್ನು ಸಹ ಬರೆದು ಪ್ರಕಟಿಸಿದ್ದಾರೆ. ಈ ಮಠದಲ್ಲಿ ವಿಶ್ವಾರಾಧ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಬಂದಿದ್ದರು. ದಾಸೋಹದ ಪದ್ಧತಿಯನ್ನು ಹಾಕಿಕೊಂಡು ಜನರ ಪ್ರೀತಿಗೆ ಪಾತ್ರರಾದರು.

**ಹಡಗಲಿ**

ಇಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ರುದ್ರಸ್ವಾಮಿ ಪಟ್ಟದ ಮಠವನ್ನು ಕಾಣಬಹುದಾಗಿದೆ. ರೇವಣಸಿದ್ದರು ಒಂದು ಸಾರಿ ಸಂಚಾರಕ್ಕೆ ಬಂದಾಗ ಮಲಪ್ರಭಾ ನದಿಯಲ್ಲಿ ಕುಳಿತು ತಪಸ್ಸು ಮಾಡಿದ ಪರಿ ಎಲ್ಲರನ್ನು ಗಾಬರಿಯನ್ನುಂಟು ಮಾಡಿತ್ತು. ಮುಂದೆ ಇವರು ಮಠದ ಏಳ್ಗಿಗೆಗೆ ಸಾಕಷ್ಟು ಶ್ರಮಿಸಿದರು. ತರುವಾಯ ಹಲವಾರು ವರ್ಷಗಳ ನಂತರ ಈ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಸಮಾಧಿಯಾದರೆಂದು ತಿಳಿದು ಬರುತ್ತದೆ. ಶ್ರೀಮಠದಲ್ಲಿ ನಿತ್ಯ ಅಭಿಷೇಕ, ಶಿವಾನುಭವ ಗೋಷ್ಠಿ, ಜಾತ್ರೆ ಮುಂತಾದವುಗಳನ್ನು



Co-ordinator,
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

ಶ್ರೀಮಠದಲ್ಲಿ ನಡೆಸುತ್ತಾ ಬಂದಿರುತ್ತಾರೆ.

**ಹುಚ್ಚೇಶ್ವರ ಮಠ**

ಹದಿನೈದನೇ ಶತಮಾನದಲ್ಲಿ ಹುಚ್ಚೇಶ್ವರ ಶ್ರೀಗಳಿಂದ ನಿರ್ಮಾಣವಾದ ಈ ಮಠವು ಊರಿನ ಮಧ್ಯಭಾಗದಲ್ಲಿ ಕಾಣಬಹುದಾಗಿದೆ. ಮಠದಲ್ಲಿ ಧಾರ್ಮಿಕ ಕಾರ್ಯಗಳು, ಪೂಜೆ-ಪುನಸ್ಕಾರಗಳು ದಿನಂಪ್ರತಿ ನಡೆದಿರುತ್ತವೆ.

**ಮಲ್ಲಾಪೂರ**

ಬಾಗಲಕೋಟ ತಾಲೂಕಿನ ಪಕ್ಕದಲ್ಲಿ ಮಲ್ಲಾಪೂರ ಗ್ರಾಮವನ್ನು ಕಾಣಬಹುದು. ಇಲ್ಲಿ ದುರುದುಂಡೇಶ್ವರ ಮಠವನ್ನು ನೋಡಬಹುದಾಗಿದೆ. ಸುಮಾರು ಮುನ್ನೂರು ವರ್ಷಗಳ ಹಿಂದೆಯೇ ಮಠವು ನಿರ್ಮಾಣವಾಗಿದೆಯೆಂದು ತಿಳಿದುಬಂದಿದೆ. ಶ್ರೀ ದುರುದುಂಡೇಶ್ವರರು ಈ ಮಠವನ್ನು ಸ್ಥಾಪಿಸಿದರು. ನಂತರ ಶ್ರೀ ಚಂದ್ರಶೇಖರ ಸ್ವಾಮಿಗಳು 1979ರಲ್ಲಿ ಮಠದ ಅಧಿಪತಿಗಳಾಗಿ ಕಾರ್ಯನಿರ್ವಹಿಸಲು ಮುಂದಾಗಿ ಮಠದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾ ಹಲವಾರು ಗೋಷ್ಠಿಗಳು ಮಹಾಂತ ಜೋಳಿಗೆಯ ಮಹಿಮೆಯನ್ನು ತಿಳಿಸುತ್ತಾ ಅನೇಕ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿದರು.

**ಮುತ್ತತ್ತಿ**

ಮುತ್ತತ್ತಿ ಗ್ರಾಮದಲ್ಲಿ 'ಶಿವಯೋಗಿಶ್ವರಮಠ' ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಇದು ಶ್ರೀಶೈಲದ ಶಾಖಾ ಮಠವಾಗಿದೆ. ಶ್ರೀ ಶಿವಯೋಗಿಶ್ವರ ಸ್ವಾಮಿಗಳು ಈ ಮಠವನ್ನು ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಸವಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಮಠವನ್ನು ಅಭಿವೃದ್ಧಿಯತ್ತ ನಡೆಸಿಕೊಂಡು ಬಂದಿರುತ್ತಾರೆ. ಧಾರ್ಮಿಕ ಕಾರ್ಯಕ್ರಮಗಳನ್ನು ಮಠದಲ್ಲಿ ದಿನಂಪ್ರತಿ ನಡೆಯುತ್ತಾ ಬಂದಿವೆ.

**ಶಿರೂರ**

ಶಿರೂರ ಗ್ರಾಮವು ಸಾಹಿತ್ಯ ಮತ್ತು ಸಾಂಸ್ಕೃತಿಗೆ ಹೆಸರುವಾಸಿಯಾಗಿದೆ. ಇಲ್ಲಿ ಶ್ರೀ ಸಿದ್ದೇಶ್ವರ ದೇವರ ಗುಡಿಯನ್ನು ಕಾಣಬಹುದಾಗಿದೆ. ಗ್ರಾಮದವರೆಲ್ಲ ಕೂಡಿಕೊಂಡು ಈ ಗುಡಿಗೆ ಶ್ರೀ ಸಿದ್ದೇಶ್ವರ ಮಠ ಎಂದು ಕರೆದರು. ಇದಕ್ಕೆ ಕಾರಣೀ ಕರ್ತರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಸವದತ್ತಿಯಲ್ಲಿ ಜನಿಸಿ ಲೋಕ ಕಲ್ಯಾಣಕ್ಕಾಗಿ ಸಂಚಾರ ಮಾಡುತ್ತ ಐಹೊಳೆ, ರಾಮಥಾಳ, ಸಿದ್ದನಕೊಳ್ಳ ಮುಂತಾದ ಸ್ಥಳಗಳಿಂದ ಬಂದು ಶಿರೂರ ಗ್ರಾಮಕ್ಕೆ ನೆಲೆ ನಿಂತು ಮೌನವೃತವನ್ನು ಆಚರಿಸಿ ಮಹಾನ್ ಸಿದ್ದಿಯನ್ನು ಪಡೆದುಕೊಂಡರು ತರುವಾಯ ಗ್ರಾಮದ ಜನರಿಗೆ ಕುಂದು ಕೊರತೆಗಳನ್ನು ನಿಗಿಸಿ ಅವರಿಗೆ ವರದಾನರಾದರು. ಶ್ರೀಗಳು ಶಿಕ್ಷಣ ರಂಗದಲ್ಲಿ ಮುಂದುವರೆದು ಸಿದ್ದೇಶ್ವರ ವಿದ್ಯಾವರ್ಧಕ ಸಂಘವನ್ನು ಕಟ್ಟಿ ಹಲವಾರು ಶಾಲೆಗಳನ್ನು ಪ್ರಾರಂಭಿಸಿದರು.

**ಮಹಾಂತ ತೀರ್ಥ**

ಶಿರೂರದ ನಂತರ ಎರಡು ಕಿಲೋ ಮೀಟರ್ ಕ್ರಮಿಸಿದರೆ ಶ್ರೀ ಮಹಾಂತ ತೀರ್ಥವು ಕಾಣುವುದು. ಇದು ಚಿತ್ತರಗಿಯ ಶಾಖಾಮಠವಾಗಿ ಬಂದಿದೆ. ಶ್ರೀ ಮಹಾಂತ ಸ್ವಾಮಿಗಳು ಈ ಮಠದ ನಿರ್ಮಾಣಕಾರರು. ಇದು ಗುಡ್ಡದಲ್ಲಿ ಅರಳಿ ನಿಂತ ಮಠವಾಗಿದೆ. ಇಲ್ಲಿರುವ ನೀರಿನ ಝರಿಯು ಬೆಸಿಗೆಯಲ್ಲಿಯೂ ಸಹ ಬತ್ತುವುದಿಲ್ಲ. ಅದಕ್ಕಾಗಿ ಇದಕ್ಕೆ 'ಮಹಾಂತ ತೀರ್ಥ' ಎಂಬುದಾಗಿ ಕರೆದಿದ್ದಾರೆ.

ಇಲ್ಲಿ ಪ್ರತಿ ವರ್ಷ ಶರಣರ ತತ್ವಾದರ್ಶಗಳನ್ನು ಚರ್ಚೆ ಸಮಾವೇಶದ ಹಾಗೂ ಶರಣ ಸಂಸ್ಕೃತಿ ಉತ್ಸವ, ಅಂಬಿಗರ ಚೌಡಯ್ಯನ ಉತ್ಸವ, ಬಸವ ಜಯಂತಿ ಮುಂತಾದವುಗಳನ್ನು ಆಚರಿಸುತ್ತಾ ಬಂದಿದ್ದಾರೆ.

**ಹಳ್ಳೂರು**

ಹಳ್ಳೂರಿನಲ್ಲಿಯೂ ಸಹ ಕಮತಗಿಯ ಹುಚ್ಚೇಶ್ವರ ಮಠದ ಶಾಖಾ ಮಠವಾಗಿದೆ. ಇಲ್ಲಿ ಬಸವೇಶನ ಮೂರ್ತಿ ನೋಡುಗರಿಗೆ ಆಶ್ಚರ್ಯ ಹಾಗೂ ಭಕ್ತಿ ಭಾವದಿಂದ ನಮಸ್ಕರಿಸುತ್ತಾರೆ. ಜಾತ್ರೆಯ ದಿನದಂದು ಹಲವಾರು ಕಾರ್ಯಕ್ರಮಗಳನ್ನು ಮಠದಲ್ಲಿ ಹಮ್ಮಿಕೊಂಡಿರುತ್ತಾರೆ.

**ಜಮಖಂಡಿ ತಾಲೂಕು**

ಧಾರ್ಮಿಕ ಕ್ಷೇತ್ರದಲ್ಲಿ ಜಮಖಂಡಿ ತಾಲೂಕು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಸುಮಾರು 55 ಮಠಗಳನ್ನು ಇದ್ದವೆಂಬುದು ತಿಳಿದು ಬಂದಿದೆ. ಪ್ರಸ್ತುತದಲ್ಲಿ 17 ರಿಂದ 18 ಮಠಗಳು ಅಸ್ತಿತ್ವದಲ್ಲಿವೆ.

**ಹುಲ್ಯಾಳ**

ರಂಭಾಪುರಿ ಪೀಠದ ಶಾಖಾ ಮಠವಾಗಿರುವ 'ಹಿರೇಮಠವು' ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಚುಕ್ಕಾಣಿ ಹಿಡಿದು ನಂತರದಲ್ಲಿ ಶ್ರೀ ವಿದ್ಯಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುತ್ತಾರೆ.

**ಹಿರೇಪಡಸಲಗಿ**

ಹಿರೇಪಡಸಲಗಿಯಲ್ಲಿ ಉಜ್ಜಯನಿ ಪೀಠದ ಶಾಖಾ ಮಠವಾಗಿ 'ಹಿರೇಮಠ'ವು ಸ್ಥಾಪನೆಯಾಯಿತು. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರು. ನಂತರದಲ್ಲಿ ಶ್ರೀ ಸಿದ್ದರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ಮೂರು ಗದ್ದುಗೆಗಳಿದ್ದು ಪ್ರತಿದಿನ ಪೂಜೆ ಪ್ರವಚನ ಅನ್ನದಾಸೋಹ, ಉಪನ್ಯಾಸ ನಡೆಸುತ್ತಾ ಬಂದಿದ್ದಾರೆ.

**ಹಿಪ್ಪರಗಿ**

ಶ್ರೀಶೈಲ ಪೀಠದ ಶಾಖಾ ಮಠವಾದ 'ಹಿರೇಮಠ'ವು ಪ್ರಾಚೀನ ಕಾಲದಲ್ಲಿ ಸ್ಥಾಪನೆಯಾದ ಮಠವಾಗಿದೆ. ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಇದರ ರೂವಾರಿಗಳೆಂದು ಹೇಳಬಹುದು. ನಂತರದಲ್ಲಿ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಂದ್ರಕಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಡಾ. ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀಮಠವನ್ನು ಬೆಳೆಸಿದವರು. ಶ್ರೀಮಠದಲ್ಲಿ 'ಸದ್ವಿಚಾರ ಸಂಗಮ' ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿರುತ್ತಾರೆ. ಜೊತೆಗೆ ಮೂವತ್ತು ದಿನಗಳ ಕಾಲ ಪುರಾಣ ಪ್ರವಚಣಗಳನ್ನು ನಡೆಸುತ್ತಿದ್ದರು.

**ಬಾಗೋಜಿ ಮಠ**

ವಿರಕ್ತ ಸಂಪ್ರದಾಯವನ್ನು ಪಡೆದುಕೊಂಡು ಬಂದ ಈ ಮಠವು ಅತಿ ಪುರಾತನದಿಂದ ಕೂಡಿದೆ. ಶ್ರೀ ಮುರುಘಯ್ಯ ಸ್ವಾಮಿಗಳಿಂದ ಮಠವು ನಿರ್ಮಾಣವಾಯಿತೆಂದು ತಿಳಿದುಬಂದಿದೆ. ಮಠದಲ್ಲಿ ಸಾಮೂಹಿಕ ಲಿಂಗದೀಕ್ಷೆ, ವಿದ್ಯಾರ್ಥಿಗಳು ಹಿತದೃಷ್ಠಿಯಿಂದ ಹಲವಾರು ಯೋಜನೆಗಳನ್ನು ತಯಾರಿಸುತ್ತಿದ್ದರು.

ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

**ಹುನಗುಂದ**

ಹುನಗುಂದ ತಾಲೂಕಿನಲ್ಲಿ ಐದು ಮಠಗಳನ್ನು ಕಾಣಬಹುದಾಗಿದೆ. ಮೂರು ಮಠಗಳು ಸಂಸಾರಿ ಮಠಗಳಾಗಿ ಹೋಗಿವೆ. ಉಳಿದ ಮಠಗಳು ಶ್ರೀಗಳಿಲ್ಲದೆ ನಿತ್ಯ ಪೂಜಾ ಪದ್ಧತಿಗಳನ್ನು ಮಾಡುತ್ತಾ ಬರುತ್ತಿದ್ದಾರೆ. ಹುನಗುಂದ ತಾಲೂಕಿನ ಕಪ್ಪುಮಣ್ಣು, ಕುಡಿಯುವ ನೀರು, ಪ್ರಕೃತಿಯ ಒಡಲು, ಜನರು ಧಾರ್ಮಿಕ ಕ್ಷೇತ್ರಗಳು ಮುಂತಾದವುಗಳಲ್ಲಿ ಪ್ರಖ್ಯಾತಿ ಹೊಂದಿದೆ.

**ಬಾಗಲಕೋಟ ತಾಲೂಕು**

ಬಾಗಲಕೋಟ ತಾಲೂಕು ಸಮಗ್ರವಾಗಿ ಅಧ್ಯಯನ ಮಾಡಿದಾಗ ಇಲ್ಲಿ ಹಲವಾರು ಕ್ಷೇತ್ರಗಳಲ್ಲಿ ಜನರು ಬಹುಮುಖ ಪ್ರತಿಭೆಯನ್ನು ಹೊಂದಿರುತ್ತಾರೆ. ಇಲ್ಲಿರುವ ಜನ ಹೃದಯವಂತರು ಇಂತಹ ತಾಲೂಕಿನಲ್ಲಿ ಒಟ್ಟು 58 ಮಠಗಳಿದ್ದವೆಂದು ತಿಳಿದು ಬರುತ್ತವೆ. ಕ್ಷೇತ್ರಕಾರ್ಯ ಮಾಡಿದಾಗ 16 ರಿಂದ 17 ಮಠಗಳು ಅಸ್ತಿತ್ವದಲ್ಲಿವೆಂಬುದುದು ದಾಖಲಿಸಬಹುದು.

**ಬಾಗಲಕೋಟ**

ಬಿಜಾಪುರ ಜಿಲ್ಲೆಯಿಂದ ಬೇರ್ಪಡಿಸಿ ಬಾಗಲಕೋಟ ಜಿಲ್ಲೆಯನ್ನಾಗಿ ಮಾಡಿದಾಗ ಇಲ್ಲಿ ಹಲವಾರು ಮಠಗಳು ಬೆಳಕಿಗೆ ಬಂದವು. ಇವು ಹನ್ನೆರಡನೇ ಶತಮಾನದ ಪೂರ್ವದಲ್ಲಿ ಹಲವಾರು ಮಠಗಳಿದ್ದವು.

**ತೆಂಗಿನಮಠ (ಟೇಕಿನಮಠ)**

ತಾಲೂಕಿನಲ್ಲಿ ಯಾವುದೇ ಸ್ಥಳದಲ್ಲಿ ನಿಂತರೆ ನಮಗೆ ಕಾಣುವುದು 'ತೆಂಗಿನಮರ'. ಅದನ್ನು ಕಾಣಲು ಹೋದಾಗ ಅಲ್ಲಿ ನಮಗೆ ಕಾಣುವುದು ತೆಂಗಿನಮಠ, ಟೇಕಿನಮಠ ಮೊದಲು ಈ ಮಠವನ್ನು ಶ್ರೀ ಮ.ನಿ.ಪ್ರ ರಾಜೋಟಿ ಸ್ವಾಮಿಗಳು ಮಠವನ್ನು ಸ್ಥಾಪಿಸಿದರೆಂದು ತಿಳಿದು ಬಂದಿದೆ. ನಾಲ್ಕು ತಲೆಮಾರುಗಳ ತನಕ ಈ ಮಠವು ಬೆಳೆಯುತ್ತಾ ಬಂದಿದೆ. ಶ್ರೀ ಮ.ನಿ.ಪ್ರ ಗುರುಬಸವ ಸ್ವಾಮಿಗಳು, ಶ್ರೀ ಮ.ನಿ.ಪ್ರ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಮ.ನಿ.ಪ್ರ ರಾಜೋಟಿ ಸ್ವಾಮಿಗಳು, ಶ್ರೀ ಮ.ನಿ.ಪ್ರ ಮಲ್ಲಿಕಾರ್ಜುನ ಸ್ವಾಮಿಗಳು ಮಠದ ಸರ್ವತೋಮುಖ ಅಭಿವೃದ್ಧಿಯಲ್ಲಿ ಶ್ರಮಿಸಿದವರು.

**ಟೇಕಿನಮಠ**

ಟೇಕಿನಮಠವು ತೆಂಗಿನಮಠದ ಪಕ್ಕದಲ್ಲಿ ಕಾಣುತ್ತದೆ. ಶ್ರೀ ಚನ್ನವೀರ ಸ್ವಾಮಿಗಳು ಮಠದ ಕರ್ತೃ ಎಂದು ತಿಳಿದು ಬಂದಿದೆ. ಇವರು ಮಹಾನ್ ಪಂಡಿತರಾಗಿದ್ದರೆಂದು ಹಾಗೂ ವಿಮರ್ಶಕರಾಗಿ ಹೊರಹೊಮ್ಮಿ ಟೀಕಾಕಾರರು ಎಂಬ ಬಿರುದಿಗೆ ಪಾತ್ರರಾಗಿ ಮುಂದೆ ಟೇಕಿನಮಠವಾಯಿತೆಂಬ ಪ್ರತೀತಿ. ಶ್ರೀಮಠದಲ್ಲಿ ಗದ್ದುಗೆ ಪೂಜೆ ಶಿವಾನುಭವ ಗೋಷ್ಠಿಗಳು, ಅನ್ನದಾಸೋಹ ವ್ಯವಸ್ಥೆ ನಿರಂತರವಾಗಿರುತ್ತದೆ. ಹಲವಾರು ಶಾಖಾ ಮಠಗಳನ್ನು ಹೊಂದಿದೆ. ಗ್ರಾಮೀಣ ಭಾಗಗಳಲ್ಲಿ ಆಂಗ್ಲ ಹಾಗೂ ಸಾಂಸ್ಕೃತ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಿ ಎಲ್ಲರಿಗೂ ಕಡ್ಡಾಯವಾಗಿ ಶಿಕ್ಷಣ ಪಡಯಬೇಕೆಂದು ಶ್ರೀಗಳ ಕನಸಾಗಿತ್ತು.

**ಚರಂತಿಮಠ**

ಬಾಗಲಕೋಟ ತಾಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಭಕ್ತರನ್ನು ಚರಂತಿಮಠವು ಹೊಂದಿದೆ. ಇದು ನಗರದ ಮಧ್ಯಭಾಗದ ಹುಂಡೇಕಾರ ಗಲ್ಲಿಯಲ್ಲಿ ಕಾಣುತ್ತೇವೆ. ಶ್ರೀ ಪ್ರಭುಸ್ವಾಮಿಗಳಿಂದ ಮಠವು ಸ್ಥಾಪನೆಯಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ತದನಂತರ ಶ್ರೀ ಮ.ನಿ.ಪ್ರ ಶಿವ[illegible] ಸ್ವಾಮಿಗಳು ಅಧಿಕಾರಕ್ಕೆ ಬಂದು ಧಾರ್ಮಿಕ ಪರಿಸರ [illegible]ರಿಸಲು ಸಾಧ್ಯವಾಯಿತು. ಇವರ ನಂತರ ಉತ್ತರಾಧಿಕಾರಿಗಳಾಗಿ ಶ್ರೀ ಮ.ನಿ.ಪ್ರ ಪ್ರಭುಸ್ವಾಮಿಗಳು ನೇಮಕವಾಗಿ ಸಮಗ್ರವಾಗಿ ಮಠಕ್ಕೆ ಹೊಸ ರೂಪವನ್ನು ನೀಡಿ ಕಾನೂನಿನ ಚೌಕಟ್ಟಿನಲ್ಲಿ ಎಲ್ಲಾ ಆಸ್ತಿಯನ್ನು ದಾಖಲಿಸಿ ಇಲ್ಲಿನ ಮಠ ಹಾಗೂ ನಿಡಸೂಸಿ ಮಠದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಸಾಗರದಂತೆ ಭಕ್ತರು ಬರುವಂತೆ ಶ್ರಮಿಸಿದ ಶ್ರೀಗಳು ಮಠದಲ್ಲಿ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು, ಅಕ್ಕನಬಳಗ ಮುಂತಾದ ರೀತಿಯಲ್ಲಿ ಸಮಗ್ರವಾಗಿ ಮಠವು ಬೆಳವಣಿಗೆಯಾಗತೊಡಗಿತು. ಶ್ರೀಗಳು ಜನರಲ್ಲಿರುವ ಅಜ್ಞಾನ, ಅಂದಕ್ಕಾರ, ಮೂಢನಂಬಿಕೆ ತಮ್ಮ ನುಡಿಗಳಿಂದ ಹೊಗಲಾಡಿಸಿ ಭಕ್ತರ ಪ್ರೀತಿಗೆ ಪಾತ್ರರಾದರು.

**ಕಸ್ತೂರಿಮಠ**

ಉಜ್ಜಯನಿ ಪೀಠದ ಶಾಖಾ ಮಠವಾದ 'ಕಸ್ತೂರಿ ಮಠವು' ಗೃಹಮಂಡಳಿ ಬಡಾವಣೆಯಲ್ಲಿದೆ ಶ್ರೀ ದೊಡ್ಡಯ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರೆಂದು ತಿಳಿದು ಬಂದಿದೆ. ಇವರ ನಂತರ ಶ್ರೀ ಕರಿಬಸವ ಶಿವಯೋಗಿಗಳು 1982ರಲ್ಲಿ ಗುಳೇದಗುಡ್ಡದ ಮರಡಿಮಠದ ಶ್ರೀ ಕಾಡಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದದಿಂದ ಪಟ್ಟಾಭಿಷೇಕವಾಗಿ ಗದ್ದನಕೇರಿ, ಮುಧೋಳಗಳಲ್ಲಿ ಶಾಖಾಮಠಗಳನ್ನು ಸ್ಥಾಪಿಸಿದರು. ಮಠಗಳಲ್ಲಿ ಧಾರ್ಮಿಕ ಪ್ರಚಾರವನ್ನು ಮಾಡುತ್ತಾ ದಸರಾ ಪೂಜೆ, ಪುರಾಣ, ಪ್ರವಚನ, ಅನ್ನದಾಸೋಹ, ಅಕ್ಷಯ ತೃತೀಯಾದಲ್ಲಿ ಏಕೋರಾಮ ಜಯಂತಿ ಉತ್ಸವ ಮುಂತಾದವುಗಳು ಶ್ರೀಮಠದಲ್ಲಿ ಜರುಗುತ್ತವೆ.

**ಬಿಲ್ವಕೇರೂರು**

ಶ್ರೀ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು 600 ವರ್ಷಗಳ ಹಿಂದೆಯೇ ಮಠವನ್ನು ಸ್ಥಾಪಿಸಿದ್ದಾರೆಂದು ತಿಳಿದು ಬಂದಿದೆ. ಇವರ ನಂತರ ಶ್ರೀ ಶಾಂತವೀರಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೀರಬಸವ ಶಿವಾಚಾರ್ಯಸ್ವಾಮಿಗಳು, ಶ್ರೀ ಎರಡನೇಯ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮೂರನೇಯ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಮುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಸಂಪೂರ್ಣ ಬೆಳವಣಿಗೆಗೆ ಶ್ರಮಿಸಿದವರು. ಈ ಮಠದಲ್ಲಿ ಎರಡು ಗದ್ದುಗೆಗಳನ್ನು ಕಾಣಬಹುದು. ತಿಮ್ಮಾಪೂರ ಶಾಖೆಯಲ್ಲಿ ಒಂದು ನಾಯನೇಗಲಿ, ಬೆಣ್ಣೂರ ಶಾಖೆಗಳಲ್ಲಿ ಮಠಗಳನ್ನು ಕಾಣಬಹುದಾಗಿದೆ. ಅಮವಾಸೆ, ಹುಣ್ಣಿಮೆ ದಿನಗಳಲ್ಲಿ ವಿಶೇಷ ಪೂಜೆಗಳನ್ನು ಮಾಡಲಾಗುವುದು.

**ಬೇವೂರು**

ಬಾಗಲಕೋಟ ಪೂರ್ವಕ್ಕೆ 23 ಕಿಲೋ ಮೀಟರ್ ಹೋದರೆ 'ಬೇವೂರು' ಗ್ರಾಮವು ನಮಗೆ ಗೋಚರಿಸುತ್ತದೆ. ಇಲ್ಲಿ ಶ್ರೀ ಗೌರಿಶಂಕರ ಮಠ ಮತ್ತು ಕಮತಗಿ ಹುಚ್ಚೇಶ್ವರ ಮಠದ ಶಾಖಾಮಠವೂ ಕಾಣಬಹುದಾಗಿದೆ.

**ಗೌರಿಶಂಕರ ಮಠ**

ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಂದ ಈ ಮಠವು ರೂಪತಾಳಿತು. ಇವರು ಕಾಶಿ ಹಾಗೂ ಹಿಮಾಲಯದಲ್ಲಿ ತಪಸ್ಸು ಮಾಡಿ ಈ ಗ್ರಾಮಕ್ಕೆ ಬಂದು ನೆಲೆನಿಂತರು. ಶ್ರೀ ಮಠದಲ್ಲಿ ಗೌರಿ ಶಂಕರ ಗದ್ದುಗೆ ನಿರ್ಮಿಸಿ ಅದಕ್ಕೆ ನಿತ್ಯ ಪೂಜೆ, ನೈವೇದ್ಯ ಮಾಡುವುದರ ಜೊತೆಗೆ ಪ್ರತಿ ವರ್ಷ ದೇವಿ ಪುರಾಣವನ್ನು

ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ನಂತರದಲ್ಲಿ ಶ್ರೀ ಚರಂತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಯಾಣಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮಿಗಳು, ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮರಿರೇವಣಸಿದ್ದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಬೆಳೆಸಿದವರಾಗಿದ್ದಾರೆ. ಇಲ್ಲಿ ಪ್ರವಚನ ಸಾಮೂಹಿಕ ವಿವಾಹ, ಬಡವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ವ್ಯವಸ್ಥೆ ಕಲ್ಪಿಸುವುದಾಗಿದೆ.

**ಬೀಳಗಿ ತಾಲೂಕು**

ಬಸವಣ್ಣನು ತನ್ನ ಬಾಲ್ಯದ ದಿನಗಳನ್ನು ಕಳೆದ ತಾಲೂಕದ 'ಚಿಕ್ಕಸಂಗಮ'ವು ಪ್ರತಿಷ್ಠೆಯನ್ನು ಪಡೆದು ಕೊಂಡಿದೆ. ಈ ತಾಲೂಕಿನಲ್ಲಿ 50 ಮಠಗಳಿದ್ದವು. ಇಂದಿನ ದಿನಗಳಲ್ಲಿ 10/11 ಮಠಗಳನ್ನು ವಿವರಿಸಬಹುದಾಗಿದೆ.

**ಕುಂದರಗಿ**

ಕುಂದರಗಿಯಲ್ಲಿ 'ಹಿರೇಮಠ'ವನ್ನು ಕಾಣಬಹುದು. ಇದು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಇದು ಪುರಾತನ ಕಾಲದೆಂದು ತಿಳಿದು ಬಂದಿದೆ. ಮಠದ ಸಂಸ್ಥಾಪಕರ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಎಂಟನೇಯ ಗುರುಗಳಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಅಭಿವೃದ್ಧಿಯಲ್ಲಿ ವಿಶೇಷ ಪಾತ್ರವಹಿಸಿದ್ದಾರೆ.

**ಗಲಗಲಿ**

ಗಲಗಲಿಯಲ್ಲಿ ಕಾಶಿಮಠವನ್ನು ಕಾಣಬಹುದು. ಇದು ಕಾಶಿಮಠದ ಶಾಖಾಮಠವಾಗಿದೆ. ಜೊತೆಗೆ ಮಠದ ಹೊರಗಡೆ ವೀರಭದ್ರ ಮತ್ತು ಈಶ್ವರ ದೇವಸ್ಥಾನವನ್ನು ಕಾಣಬಹುದು.

**ಗಿರಿಸಾಗರ**

ಗಿರಿಸಾಗರದಲ್ಲಿ 'ಕಲ್ಯಾಣ ಹಿರೇಮಠ'ವು ಪುರಾತನ ಕಾಲದ್ದಾಗಿದೆ. ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಮಠದ ರೂವಾರಿಗಳೆಂದು ಹೇಳಬಹುದು. ಇವರು ಕಲ್ಯಾಣದಿಂದ ಬಂದು ನೆಲೆನಿಂತದ್ದಕ್ಕಾಗಿ 'ಕಲ್ಯಾಣ ಹಿರೇಮಠ' ಎಂಬ ಹೆಸರನ್ನು ಇಡಲಾಗಿದೆ. ಶ್ರೀ ಮುದಿ ಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುಕ್ತಿನಾಥ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಅಭಿವೃದ್ಧಿಗೆ ಶ್ರಮಿಸಿದವರು. ಶ್ರೀಮಠದಲ್ಲಿ ನಿತ್ಯ ಪೂಜೆ, ಶ್ರಾವಣ ಮಾಸದಲ್ಲಿ ಪುರಾಣ ವಿಶೇಷ ಪೂಜೆ, ಶಿವರಾತ್ರಿಯಲ್ಲಿ ಜಾತ್ರೆ ನಡೆಸಲಾಗುವುದು.

**ಗುಳಬಾಳ**

ಗುಳಬಾಳದಲ್ಲಿ 'ಕೇದಾರಮಠ'ವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇಲ್ಲಿ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಪೂರ್ವಾಶ್ರಮದ ಮಠವೂ ಇದೆ.

**ನಾಗರಾಳು**

ನಾಗರಾಳದಲ್ಲಿ 'ದಿಗಂಬರೇಶ್ವರ ಮಠ'ವು ಗ್ರಾಮದ ಹೊರಭಾಗದಲ್ಲಿದೆ. ಉಜ್ಜಯಿನಿ ಪೀಠದ ಶಾಖಾಮಠವಾಗಿದೆ. ಶ್ರೀ ದಿಗಂಬರೇಶ್ವರರು ಸ್ಥಾಪಿಸಿದ್ದಾರೆ. ಇವರ ನಂತರ ಶ್ರೀ ಶಿವಲಿಂಗ ಸ್ವಾಮಿಗಳು, ಶ್ರೀ ನಿಂಗಪ್ಪಯ್ಯ ಸ್ವಾಮಿಗಳು, ಶ್ರೀ ಶೇಷಪ್ಪಯ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇಲ್ಲಿ ನಾಡಿನ ಹಲವಾರು ಪಂಡಿತರನ್ನು ಕರೆಯಿಸಿ ಪುರಾಣ, ವಿವಿಧ ಗೋಷ್ಠಿಗಳನ್ನು ನಡೆಸುತ್ತಾರೆ.

**ಬಕ್ಕೇಶ್ವರ**

ಬೀಳಗಿ ತಾಲೂಕಿನಲ್ಲಿ 'ಬಕ್ಕೇಶ್ವರಮಠ'ವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ವಿವಿಧ ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಂಡು ಬಂದಿದೆ.

**ಬಾಡಗಂಡಿ**

ಬಾಡಗಂಡಿಯಲ್ಲಿ ಶ್ರೀ 'ಕರವೀರಮಠ'ವು ಪ್ರಸ್ತುತ ದಿನಗಳಲ್ಲಿ ರೂಪತಾಳಿದೆ. ಉಜ್ಜಯಿನ ಪೀಠದ ಶಾಖಾಮಠವಾಗಿದೆ. ಶರಣೆ ಬಸಮ್ಮ ತಾಯಿಯವರು ಈ ಮಠವನ್ನು ನಡೆಸಿಕೊಂಡು ಬಂದಿರುತ್ತಾರೆ.

**ಬೀಳಗಿ**

ಬೀಳಗಿಯಲ್ಲಿ ಸುಮಾರು 8 ರಿಂದ 9 ಮಠಗಳನ್ನು ಕಾಣುತ್ತೇವೆ. ಪ್ರತಿಯೊಂದು ಮಠಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುತ್ತವೆ.

**ಸೋಮಪ್ಪಯ್ಯ ಮಠ**

ಹನ್ನೆರಡನೇ ಶತಮಾನದ ಹಳೇಯದಾದ ಈ ಮಠವನ್ನು ಶ್ರೀ ಸೋಮಪ್ಪಯ್ಯ ಸ್ವಾಮಿಗಳು ಮಠದ ರೂವಾರಿಗಳೆಂದು ಹೇಳಬಹುದು. ನಂತರದಲ್ಲಿ ಶ್ರೀ ಮುರುಘಯ್ಯ ಸ್ವಾಮಿಗಳು ಶ್ರೀ ಸಂಗಯ್ಯ ಸ್ವಾಮಿಗಳು, ಶ್ರೀ ಸಂಗನ ಬಸವ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಸಿದ್ದಲಿಂಗ ಸ್ವಾಮಿಗಳು, ಶ್ರೀ ಮಠದಲ್ಲಿ ಪುಣ್ಯಾರಾಧನೆ, ಪೂಜೆ ವಿವಿಧ ಕಾರ್ಯಕ್ರಮಗಳು ಜರುಗುತ್ತವೆ.

**ಹಿರೇಮಠ**

ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ 'ಹಿರೇಮಠ'ವು ಹೊರಹೊಮ್ಮಿದೆ. ಶ್ರೀ ಸಿದ್ದರಾಮ ಶಿವಾಚಾರ್ಯ ಸ್ವಾಮಿಗಳಿಂದ ಹಿಡಿದು ಶ್ರೀ ಗುರುಪಾದದೇವರು ತನಕ ಸುಮಾರು ಹತ್ತು ಜನ ಶ್ರೀಗಳು ಮಠದ ಪ್ರಗತಿಗೆ ಶ್ರಮಿಸಿದವರಾಗಿದ್ದಾರೆ.

**ಬೂದಿಹಾಳ**

ಬೂದಿಹಾಳ ಎಸ್.ಜಿ.ಗ್ರಾಮದಲ್ಲಿ 'ಫಕೀರೇಶ್ವರ ಮಠ' ಕಾಣುತ್ತೇವೆ. ಶ್ರೀ ಫಕೀರೇಶ್ವರ ಸ್ವಾಮಿಗಳು ಬಿಜಾಪೂರದಿಂದ ಸಂಚಾರಕ್ಕೆಂದು ಬಂದು ಇಲ್ಲೇ ನೆಲೆಸಿದ್ದರಿಂದ ಈ ಮಠಕ್ಕೆ ಫಕೀರೇಶ್ವರ ಮಠ ಎಂದು ನಾಮಕರಣ ಮಾಡಲಾಯಿತು. ಶ್ರೀ ಸಂಗಯ್ಯ ಸ್ವಾಮಿಗಳು, ಶ್ರೀ ಸಿದ್ದರಾಮ ಸ್ವಾಮಿಗಳು, ಶ್ರೀ ಪ್ರಭು ಸ್ವಾಮಿಗಳು ಮಠದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಜಾತ್ರೆಯ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಅನ್ನದಾಸೋಹ ಪೂಜೆಗಳನ್ನು ನಡೆಸುತ್ತಾ ಬಂದಿದ್ದಾರೆ.

**ಮುಧೋಳ ತಾಲೂಕು**

ಮುಧೋಳ ತಾಲೂಕು ಸಾಂಸ್ಕೃತಿಕ ಲೋಕಕ್ಕೆ ಅಪಾರ ಕೊಡುಗೆ ನೀಡಿದೆ. ಇಲ್ಲಿನ ಫಲವತ್ತಾದ ಕಪ್ಪು ನೆಲ, ಹೃದಯವಂತ ಜನರು, ಸಾಹಿತಿಗಳು ಅಪಾರ ಸಂಖ್ಯೆಯಲ್ಲಿ ಕಾಣುತ್ತೇವೆ. ಈ ತಾಲೂಕಿನಲ್ಲಿ 46 ಮಠಗಳನ್ನು ಕಾಣುತ್ತೇವೆ. ಇಂದು ಸುಮಾರು 7 ರಿಂದ 8 ಮಠಗಳನ್ನು ಕಾಣುತ್ತೇವೆ.

**ಇಂಗಳಗಿ**

ಇಂಗಳಗಿಯಲ್ಲಿ 'ಹಿರೇಮಠ'ವನ್ನು ಕಾಣಬಹುದು. ಶ್ರೀ

**ಮರೆಗುದ್ದಿ**

ಮರೆಗುದ್ದಿಯಲ್ಲಿ ಒಟ್ಟು ಮೂರು ಮಠಗಳನ್ನು ಕಾಣಬಹುದಾಗಿದೆ.

**ಅಡವಿಸಿದ್ಧೇಶ್ವರ ಮಠ**

ಶ್ರೀ ಅಡವಿಸಿದ್ಧೇಶ್ವರ ಮಠವು 1830ರಲ್ಲಿ ಶ್ರೀ ಮಡಿವಾಳ ಸ್ವಾಮಿಗಳು ಸ್ಥಾಪಿಸಿದರು. ಶ್ರೀಮಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಮುಂತಾದ ರಂಗದಲ್ಲಿ ಹೆಸರುವಾಸಿಯಾಗಿದೆ. ನಂತರದಲ್ಲಿ ಶ್ರೀ ಮ.ನಿ.ಪ್ರ ಪರಮಾರ್ಯಸ್ವಾಮಿಗಳು, ಶ್ರೀ ಮ.ನಿ.ಪ್ರ ರಾಚೋಟೇಶ್ವರ ಸ್ವಾಮಿಗಳು, ಶ್ರೀ ಗುರುಪಾದಸ್ವಾಮಿಗಳು, ಶ್ರೀ ನಿರುಪಾದಿಸ್ವಾಮಿಗಳು, ಶ್ರೀ ಗುರುಪ್ರಾದ ದೇವರು ಮಠದ ಬೆಳವಣಿಗೆಗೆ ಶ್ರಮಿಸಿದವರು. ಮಠದ ಹೊರಗಡೆ ಪೇಟೆ ಬಸವನಗುಡಿ, ಕಾಳಿಕಾದೇವಿ, ವೀರಭದ್ರದೇವರು ಮೂರ್ತಿಗಳನ್ನು ಕಾಣಬಹುದಾಗಿದೆ. ಮಠದಲ್ಲಿ ನಿತ್ಯ ಪೂಜೆ ಅನ್ನ ಸಂತರ್ಪಣೆ ವಿವಿಧ ಕಾರ್ಯಕ್ರಮಗಳನ್ನು ಶ್ರೀಗಳು ನಡೆಸುತ್ತಾ ಬಂದಿದ್ದಾರೆ.

**ಮಹಾಂತ ಮಠ**

ವಿರಕ್ತಮಠವಾದ ಮಹಾಂತಮಠವು 1987 ರಲ್ಲಿ ಶ್ರೀ ಗುರುಮಹಾಂತ ಸ್ವಾಮಿಗಳು ಸ್ಥಾಪಿಸಿದರು. ಮಠದಲ್ಲಿ ಉಚಿತ ಪ್ರಸಾದ, ಬಡಮಕ್ಕಳಿಗೆ ಶಿಕ್ಷಣ, ಪುರಾಣ ಪ್ರವಚನಗಳು ಜರುಗುತ್ತವೆ.

**ದಿಗಂಬರೇಶ್ವರ ಸಂಸ್ಥಾನಮಠ**

ಶಿವಾಜಿಯ ಕಾಲದ ಈ ಮಠವು ಶ್ರೀ ದಿಗಂಬರೇಶ್ವರ ಸ್ವಾಮಿಗಳು ನಿರ್ಮಾಣ ಮಾಡಿದವರೆಂದು ತಿಳಿದು ಬರುತ್ತದೆ. ಇವರ ಬಗ್ಗೆ ಹಲವಾರು ಪವಾಡಗಳನ್ನು ದಾಖಲಿಸಬಹುದಾಗಿದೆ. ಇವರ ನಂತರದಲ್ಲಿ ಶ್ರೀ ಅಪ್ಪಯ್ಯ ಸ್ವಾಮಿಗಳು, ಶ್ರೀ ನಾಗಭೂಷಣ ಸ್ವಾಮಿಗಳು, ಶ್ರೀ ತೋಟದಾರ್ಯ ಸ್ವಾಮಿಗಳು ಮಠವನ್ನು ಉನ್ನತ ಮಟ್ಟಕ್ಕೆ ತರುವುದರಲ್ಲಿ ಪ್ರಮುಖವಾಗಿದ್ದಾರೆ. ಮಠದಲ್ಲಿ ನಿತ್ಯ ಪೂಜೆ, ಶಿವಾನುಭವ ಗೋಷ್ಠಿ, ಶಿವದೀಕ್ಷೆ ನಡೆಯುತ್ತಿರುತ್ತದೆ.

**ಬಿದರಿ**

ಜಮಖಂಡಿಯಿಂದ ಮೂವತ್ತೆರಡು ಕಿಲೊಮೀಟರ್ ಹೊದರೆ 'ಕೃಷ್ಣಾ ನದಿಯ ದಂಡೆಯ ಮೇಲೆ ವಿರಕ್ತರ ಮಠ ಕಾಣುತ್ತದೆ.

**ವಿರಕ್ತಮಠ**

1800ನೇಯ ಇಸವಿಯಲ್ಲಿ ಶ್ರೀ ವಿರುಪಾಕ್ಷ ಸ್ವಾಮಿಗಳಿಂದ ಮಠವು ಸ್ಥಾಪನೆಯಾಯಿತು. ಇವರು ಶರಣರ ತತ್ವಾದರ್ಶಗಳನ್ನು ಬೆಳಿಸಿ-ಉಳಿಸಿದವರು. ತರುವಾಯ ಶ್ರೀ ಕುಮಾರ ಶಿವಯೋಗಿಗಳು, ಶ್ರೀ ಅಪ್ಪಯ್ಯ ಸ್ವಾಮಿಗಳು, ಶ್ರೀ ಮಹಾಲಿಂಗ ಸ್ವಾಮಿಗಳು, ಶ್ರೀ ಶಿವಲಿಂಗ ಸ್ವಾಮಿಗಳು, ಕ್ರಿಯಾ ಶೀಲತೆಯಿಂದ ಮಠವನ್ನು ಉನ್ನತಮಟ್ಟಕ್ಕೆ ತರುವುದರಲ್ಲಿ ಯಶಸ್ವಿಯಾದರು. ಶ್ರೀ ಮಠದಲ್ಲಿ ಉನ್ನತ ಮಟ್ಟದ ವಿದ್ವಾಂಸರುಗಳನ್ನು ಕರೆಯಿಸಿ ಉಪನ್ಯಾಸ ನೀಡಿಸಿದರು.

**ತೇರದಾಳ**

ತೇರದಾಳದಲ್ಲಿ ವೀರಶೈವರು ಗಣನೀಯ ಪ್ರಮಾಣದಲ್ಲಿದ್ದು ಪುರಾತನ ಕಾಲದ ಎರಡು ಮಠಗಳನ್ನು ಕಾಣಬಹುದಾಗಿದೆ.

**ಹಿರೇಮಠ**

ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಈ ಮಠವು ಪುರಾತನ ಕಾಲದ್ದಾಗಿದೆ. ಇಲ್ಲಿಯ ಶ್ರೀಗಳ ಬಗ್ಗೆ ಸರಿಯಾದ ಮಾಹಿತಿ ಇರಲಾರದು. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಠದ ಕೊನೆಯವರಾಗಿದ್ದರೆ. ಇವರ ನಂತರದಲ್ಲಿ ಶ್ರೀ ಬಾಲ ಗಂಗಾಧರ ದೇವರು 2000ನೇ ಇಸವಿಯಲ್ಲಿ ನೇಮಕರಾದರು. ಮಠದಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ಜರುಗುತ್ತವೆ.

**ವಿರಕ್ತಮಠ**

ಹದಿನಾರನೇಯ ಶತಮಾನದಲ್ಲಿ ಈ ಮಠವನ್ನು ಶ್ರೀ ಮುಪ್ಪಿನೇಂದ್ರ ಸ್ವಾಮಿಗಳು ಸ್ಥಾಪಿಸಿದ್ದಾರೆ. ಇದು ಕೂಡಾ ಬಹಳ ವರ್ಷಗಳಿಂದ ಇದ್ದ ಮಠವಾಗಿದೆ. ಇವರು ನಂತರದಲ್ಲಿ ಶ್ರೀ ಗುರುಶಾಂತ ಸ್ವಾಮಿಗಳು, ಶ್ರೀ ಗುರುಸಿದ್ದಸ್ವಾಮಿಗಳು, ಶ್ರೀ ಶಿವಲಿಂಗ ಸ್ವಾಮಿಗಳು, ಮಠದ ಪರಂಪರೆಯಲ್ಲಿ ಅಗ್ರಜರಾಗಿದ್ದಾರೆ. ಮಠದಲ್ಲಿ ನಿತ್ಯ ಎರಡು ಸಲ ಪೂಜೆ ಜರುಗುತ್ತವೆ. ಪುರಾಣ-ಪ್ರವಚನಗಳು ನಿರಂತರವಾಗಿರುತ್ತವೆ.

**ತುಬಚಿ**

ತುಬಚಿಯಲ್ಲಿ ಶಿವಲಿಂಗೇಶ್ವರ ಮಠ ಕಾಣಬಹುದಾಗಿದೆ. ಮಠದಲ್ಲಿ ಪೂಜೆ, ಉಚಿತ ಪ್ರಸಾದ ವ್ಯವಸ್ಥೆ ಇದ್ದು, ಇದು ಕೂಡಾ ಪುರಾತನ ಕಾಲದ ಮಠವಾಗಿದೆ.

**ಜಮಖಂಡಿ**

ಜಮಖಂಡಿ ತಾಲೂಕಿನಲ್ಲಿ ವೀರಶೈವ ಮಠಗಳು ಹೆಚ್ಚಾಗಿ ನಾವು ಕಾಣುತ್ತೇವೆ. ಇವುಗಳ ಬಗ್ಗೆ ಹಲವಾರು ಸಂಶೋಧಕರು ಸಂಶೋಧನೆ ಮಾಡಿ ಹೆಸರುವಾಸಿಯಾಗಿದ್ದಾರೆ. ಇಲ್ಲಿನ ನೆಲ, ಜಲ, ಧರ್ಮ ಹಲವಾರು ಮಹತ್ವತೆಯನ್ನು ಪಡೆದುಕೊಂಡಿದೆ. ಈ ತಾಲೂಕಿನಲ್ಲಿ ಹಲವಾರು ಮಠಗಳು ಮಹತ್ವದ ಪಾತ್ರವಹಿಸಿವೆ.

**ಓಲೇಮಠ**

ಹದಿನಾರನೇಯ ಶತಮಾನದಲ್ಲಿ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಮಠದ ಶ್ರೇಯೋಭಿವೃದ್ಧಿಗೆ ಕಾರಣೀಕರ್ತರಾದವರು. ನಂತರದಲ್ಲಿ ಶ್ರೀ ಚನ್ನವೀರಸ್ವಾಮಿಗಳು, ಶ್ರೀ ಚಂದ್ರಶೇಖರ ಸ್ವಾಮಿಗಳು, ಶ್ರೀ ಸಂಗಯ್ಯ ಸ್ವಾಮಿಗಳು, ಶ್ರೀ ಸಂಗನಬಸವ ಸ್ವಾಮಿಗಳು, ಶ್ರೀ ಸಂಗಯ್ಯಸ್ವಾಮಿಗಳು, ಶ್ರೀ ಮಹಾಲಿಂಗ ಸ್ವಾಮಿಗಳು, ಶ್ರೀ ಎರಡನೇಯ ಸಂಗನಬಸವ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು ಮಠವನ್ನು ಸಂಪೂರ್ಣವಾಗಿ ಪ್ರತಿಯೊಂದು ರಂಗದಲ್ಲಿ ಹೆಸರು ವಾಸಿಯಾಗುವಂತೆ ಶ್ರಮಿಸಿದವರು. ಮಠದಲ್ಲಿ ಹಲವಾರು ಸಾಹಿತ್ಯದ ಚಿಂತನ ಗೋಷ್ಠಿಗಳು, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಶಿವಾನುಭವ ಗೋಷ್ಠಿ ನಡೆಸುವುದರ ಜೊತೆಗೆ ಶೈಕ್ಷಣಿಕ ರಂಗದಲ್ಲಿ ಹೆಸರು ವಾಸಿಯಾಗಿದೆ.

**ಮುತ್ತಿನಕಂತೆ ಹಿರೇಮಠ**

ಶ್ರೀಶೈಲ ಪೀಠದ ಶಾಖಾ ಮಠವಾಗಿ 'ಮುತ್ತಿನಕಂತೆ ಹಿರೇಮಠ'ವು ರೂಪತಾಳಿತು. ಶ್ರೀ ಇಷ್ಟಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರೆಂದು ತಿಳಿದು ಬಂದಿದೆ. ನಂತರದಲ್ಲಿ ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ವೀರುಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೀರುಪಾಕ್ಷ ಶಿವಾಚಾರ್ಯ ಸ್ವಾಮಿಗಳು ಮಠದ ಯಶಸ್ಸಿಗೆ ಕಾರಣೀಕರ್ತರಾದರು. ಶ್ರಾವಣ ಮಾಸದಲ್ಲಿ ಪುರಾಣ, ಗದ್ದುಗೆ ಪೂಜೆ ನಡೆಸಲಾಗುವುದು.

**ಕಲ್ಯಾಣ ಮಠ**

ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಕಲ್ಯಾಣಮಠವು ಕುಂಬಾರ ಗಲ್ಲಿಯಲ್ಲಿ ಕಾಣಬಹುದಾಗಿದೆ. ಶ್ರೀ ಮುಪ್ಪಿನಾರಾಧ್ಯ

M.G.V.C. Arts, Commerce & Science College MUDDEBIHAL-586212 Dt: Vijayapur

**ಚರಂತಿಮಠ**

ಕಾಶಿ ಪೀಠದ ಶಾಖಾಮಠವಾದ 'ಚರಂತಿಮಠ'ವು ಪುರಾತನವಾದದು. ಇಲಿ ಶ್ರೀ ಗದ್ದುಗಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಡಾ. ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಮಠದ ಏಳ್ಗೆಗೆ ಶ್ರಮಿಸಿದವರಾಗಿದ್ದಾರೆ. ಇಂದಿನ ಶ್ರೀಗಳು ಹಳೆಯ ಕಟ್ಟಡವನ್ನು ತೆಗೆಯಿಸಿ ನವೀನವಾದ ಮಠದ ಕಟ್ಟಡವನ್ನು ನಿರ್ಮಾಣ ಮಾಡಿಸಿ, ದಿನನಿತ್ಯ ಪೂಜೆ – ಪುನಸ್ಕಾರಗಳು ನಿರಂತರತೆಯನ್ನು ಪಡೆದುಕೊಂಡು ಬಂದಿದೆ.

**ಗುಳೇದಗುಡ್ಡ**

ಗುಳೇದಗುಡ್ಡದಲ್ಲಿ ಹಲವಾರು ಜಾತಿಯ ಜನಾಂಗದವರು ನೆಲೆಯೂರಿದ್ದಾರೆ. ಹಿಂದೂ, ಮುಸ್ಲಿಂ, ಕ್ರೈಸ್ತರು ಮುಂತಾದವರನ್ನು ಗುರುತಿಸಬಹುದು. ಆಯಾ ಧರ್ಮದ ಜನರು ದೇವರ ಮೇಲೆ ನಂಬಿಕೆಯನ್ನಿಟ್ಟುಕೊಂಡು ತಮ್ಮಲ್ಲಿರುವ ಅಹಂಕಾರ ಮತ್ತು ಮಮಕಾರಗಳನ್ನು ತ್ಯಜಿಸಿ ದೇವರ ಕೃಪೆಗೆ ಪಾತ್ರರಾಗಿ ಮೋಕ್ಷ ಹೊಂದಲು ಪ್ರಯತ್ನಿಸುತ್ತಾರೆ. ಎಲ್ಲಾ ಧರ್ಮಗಳ ಸಾರ, ಒಂದೇ 'ದೇವನೊಬ್ಬ ನಾಮ ಹಲವು' 'ಧರ್ಮೋ ರಕ್ಷತಿ ರಕ್ಷಿತಃ' ಧರ್ಮವನ್ನ ಯಾರು ರಕ್ಷಿಸುತ್ತಾರೋ ಆ ಧರ್ಮ ಅವರನ್ನ ರಕ್ಷಿಸುತ್ತದೆ. ಸೂರ್ಯ ಉದಯವಾಗುವ ಪೂರ್ವದಲ್ಲಿ ಗುಡಿ ಗುಂಡಾರಗಳಲ್ಲಿ, ದೇವಾಲಯಗಳಲ್ಲಿ ಚರ್ಚು, ಮಸೀದಿಗಳಲ್ಲಿ ಪೂಜಾ ಪುನಸ್ಕಾರಗಳು, ಘಂಟೆ, ಶಂಖ, ಜಾಗಟೆಗಳ ಧ್ವನಿ ಕೇಳಿದಾಗ ಗುಳೇದಗುಡ್ಡ ಪಟ್ಟಣವು ಸ್ವರ್ಗಕ್ಕೆ ಸಮಾನ ಎಂದು ಹೇಳಬೇಕಾಗುವುದು. ಇಲ್ಲಿನ ಜನರು ಹೆಚ್ಚಾಗಿ ದೇವರ ಆರಾದಕರಾಗಿ ನಿತ್ಯ ಬೆಳಿಗ್ಗೆ ದೇವಸ್ಥಾನಗಳಿಗೆ ಹೋಗಿ ಪೂಜೆ, ನೈವೇದ್ಯ ಮಾಡಿಸಿ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಇಲ್ಲಿರುವ ವೀರಶೈವ ಮಠಗಳು ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸಿ ವೀರಶೈವ ಧರ್ಮವನ್ನು ಬೆಳೆಸಿವೆ. ಹಲವಾರು ಶತಮಾನಗಳಿಂದ ಇಲ್ಲಿ ಹದಿನೆಂಟು ಮಠಗಳಿದ್ದು, ಇಂದು ಹನ್ನೊಂದು ಮಠಗಳು ಅಸ್ತಿತ್ವದಲ್ಲಿವೆ. ಇಲ್ಲಿನ ಮುರುಘರಾಜೇಂದ್ರಮಠ, ಶ್ರೀ ಗುರುಸಿದ್ದೇಶ್ವರ ಮಠ, ಶ್ರೀ ಮರಡಿಮಠ, ಶ್ರೀ ಶಿವಪ್ಪಯ್ಯನಮಠ, ಶ್ರೀ ಒಪ್ಪತ್ತೇಶ್ವರ ಮಠ, ಶ್ರೀ ಕಲ್ಮಠ, ಶ್ರೀ ಶರಣರ ಮಠ, ಶ್ರೀ ರೇಣುಕಾಚಾರ್ಯ ಮಠ, ಶ್ರೀ ಹೊಳೆ ಹುಚ್ಚೇಶ್ವರ ಮಠ, ಶ್ರೀ ಅಮರೇಶ್ವರ ಮಠ ಶ್ರೀ ಸಾರಂಗ ಮಠ, ಶ್ರೀ ರೇವಣಸಿದ್ದೇಶ್ವರ ಮಠ, ಶ್ರೀ ಕಿರಸೂರ ಮಠ ಈ ರೀತಿಯಾಗಿ ಹಲವಾರು ಧಾರ್ಮಿಕ ನೆಲೆಗಳನ್ನು ನಗರದಲ್ಲಿ ಕಾಣಬಹುದಾಗಿದೆ. ಈ ಮಠಗಳಲ್ಲಿ ದಿನಂಪ್ರತಿ ದೇವರ ಪೂಜಾ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಪುರಾಣ, ಪ್ರವಚನಗಳನ್ನು ನಿರಂತರವಾಗಿ ಜರುಗುತ್ತವೆ. ಭಕ್ತರ ಮನಸ್ಸಿಗೆ ಶಾಂತಿಯನ್ನ ದೊರಕಿಸಿ ಕೊಡುವ ಈ ಮಠಗಳು ಗುಳೇದಗುಡ್ಡದ ಜನರಿಗೆ ವರದಾನಗಳಾಗಿವೆ.

**ಮುರುಘಾಮಠ**

ಮುರುಘಾಮಠವು ಗುಳೇದಗುಡ್ಡದ ಮಧ್ಯಭಾಗದ ಅರಳಿಕಟ್ಟಿಯ ಹತ್ತಿರದಲ್ಲಿದ್ದು, ಮಠವು ಹನ್ನೆರಡನೇ ಶತಮಾನದಲ್ಲಿ ಸ್ಥಾಪನೆಗೊಂಡಿದೆ. ಆಫ್ಘಾನಿಸ್ಥಾನದ ಸಂತರೊಬ್ಬರು ಭಾರತದಲ್ಲಿ ಸಂಚಾರ ಕೈಗೊಂಡು ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಶರಣರ ತತ್ವಗಳಿಂದ ಪ್ರಭಾವಿತರಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿ, ಶರಣ ತತ್ವಗಳನ್ನು ಪ್ರಚಾರ ಮಾಡುತ್ತಾ ಗುಳೇದಗುಡ್ಡಕ್ಕೆ ಬಂದು ನೆಲಸಿ ಇಲ್ಲಿ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ.

ಮಠದ ಪರಂಪರೆಯು ಶ್ರೀ ಮ.ನಿ.ಪ್ರ.ಮುರುಘಿಶಾಂತವೀರ ದೇಶೀಕೇಂದ್ರ ಸ್ವಾಮಿಗಳಿಂದ ಹಿಡಿದು ಇಂದಿನ ಮ.ನಿ.ಪ್ರ. ಕುಮಾರ ಮಹಾಸ್ವಾಮಿಗಳವರೆಗಿನ ಮಠದ ಪರಂಪರೆ ನಡೆದು ಬಂದಿದೆ. ಶ್ರೀ ಮುರುಘಿಶಾಂತವೀರ ದೇಶಿಕೇಂದ್ರ ಸ್ವಾಮಿಗಳು ಪೂರ್ವಿಕರಾಗಿದ್ದು ಇವರು ಹಮ್ಮೀರಕಾವ್ಯ ವನ್ನು ರಚಿಸಿದ ವಿದ್ವಾಂಸಕರು. ಮಠದ ಹೊರಗಡೆ ಹದಿನಾಲ್ಕು ಗುದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮಾಸದಲ್ಲಿ ಕೀರ್ತನೆ ಶ್ರೀ ನೀಲಕಂಠೇಶ್ವರ ಸ್ವಾಮಿಗಳ ಪುಣ್ಯಾರಾಧನೆ, ದೀಪಾವಳಿಯಲ್ಲಿ ಕಾರ್ತಿಕೋತ್ಸವವನ್ನು ನಡೆಸಲಾಗುತ್ತದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಮಾಸಿಕ ಶಿವಾನುಭವ ಕಾರ್ಯಕ್ರಮಗಳನ್ನು ಪ್ರತಿ ವರ್ಷ ನಡೆಸಿಕೊಂಡು ಬಂದಿರುತ್ತಾರೆ. ಬಡಮಕ್ಕಳಿಗೆ ಶಿಕ್ಷಣ ದೊರಕಲಿ ಎಂಬ ಉದ್ದೇಶದಿಂದ ಶಿಕ್ಷಣ ಸಂಸ್ಥೆಯನ್ನು ಶ್ರೀಗಳೂ ಹುಟ್ಟು ಹಾಕಿದ್ದಾರೆ.

**ಗುರುಸಿದ್ದೇಶ್ವರ ಬೃಹನ್ಮಠ**

ಗುಳೇದಗುಡ್ಡದ ಬಾದಾಮಿ ನಾಕಾದಲ್ಲಿ ಈ ಮಠವನ್ನು ಕಾಣಬಹುದಾಗಿದೆ. 1937 ಡಿಸೆಂಬರ್ 27 ರಂದು ಶ್ರೀ ಗುರುಸಿದ್ದ ಪಟ್ಟದಾರ್ಯರಿಂದ ಸ್ಥಾಪನೆಯಾಗಿದೆ. ಇವರು ಸೋಲಾಪುರ ಗುರುಸಿದ್ದ ಪಟ್ಟದಾರ್ಯ ಸ್ವಾಮಿಗಳು ಅಕ್ಕಲಕೋಟೆಯ ಶ್ರೀ ರೇವಣಸಿದ್ದ ಶರಣರ ಪ್ರೇರಣೆ ಹಾಗೂ ಕೃಪಾಶೀರ್ವಾದದಿಂದ ಇಲ್ಲಿಗೆ ಶ್ರೀಗಳು ಬಂದು ಮಠವನ್ನು ಸ್ಥಾಪನೆ ಮಾಡಿದರು. ಇವರು ಲಿಂಗೈಕ್ಯರಾದ ನಂತರ ಶ್ರೀ ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳೂ 1979ರಲ್ಲಿ ಮಠದ ಪೀಠಾಧ್ಯಕ್ಷರಾಗಿ ಮಠವನ್ನು ಉನ್ನತಮಟ್ಟಕ್ಕೆ ತೆಗೆದುಕೊಂಡು ಬಂದಿರುತ್ತಾರೆ. ಅಲ್ಲದೇ ಶ್ರೀಗಳು ಅಧಿಕಾರಕ್ಕೆ ಬಂದ ನಂತರ ನೇಕಾರ ಸಮಾಜದ ಬಾಂಧವರನ್ನು ಒಗ್ಗೂಡಿಸಿ ಸರಕಾರದ ಸಕಲ ಸೌಲತ್ತುಗಳನ್ನು ಜನರಿಗೆ ತಲುಪುವಂತೆ ಶ್ರಮಿಸಿದವರು. ಮಠದಲ್ಲಿ ಧಾರ್ಮಿಕ ಪರಂಪರೆಯ ಜೊತೆಗೆ ಶೈಕ್ಷಣಿಕ ಪರಂಪರೆಯನ್ನು ಬೆಳೆಸಿಕೊಂಡು ಪ್ರಾಥಮಿಕ ಹಂತದಿಂದ ಹಿಡಿದು ಪದವಿ ಹಂತದವರೆಗೂ ಶಿಕ್ಷಣ ವಿದ್ಯಾರ್ಥಿಗಳಿಗೆ ದೊರಕುವಂತೆ ಮಾಡಿರುತ್ತಾರೆ.

**ಮರಡಿಮಠ**

ಮರಡಿಮಠ ಇದು ಗುಳೇದಗುಡ್ಡದ ಮಧ್ಯಭಾಗದಲ್ಲಿ ಕಾಣಸಿಗುತ್ತದೆ. ಈ ಮಠವು ನೋಡಲು ಸುಂದರವಾದ ಮತ್ತು ಶಾಂತಿಯುತವಾದ ವಾತಾವರಣವನ್ನು ಹೊಂದಿದ್ದು ಗುರುಕುಲದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಗುರುಪದೇಶವನ್ನು ನೀಡಲಾಗುತ್ತದೆ. ಇದಲ್ಲದೆ ಶ್ರಾವಣ ಮಾಸದಲ್ಲಿ ಕೀರ್ತನೆ, ಸಾಮೂಹಿಕ ವಿವಾಹ, ಅಯ್ಯಾಚಾರ ಮುಂತಾದುವುಗಳನ್ನು ಬಹು ವಿಜೃಂಭನೆಯಿಂದ ಜರುಗಿಸುತ್ತಾರೆ.

**ನೀಲಕಂಠೇಶ್ವರ ಮಠ**

ಸುಮಾರು 150 ವರ್ಷದ ಹಳೆಯ ತಲೆಮಾರಿನ ಮಠವಾಗಿದ್ದು. ಶಕೆ 1936ರಲ್ಲಿ ಪ್ರಾರಂಭವಾದ ಮಠವಾಗಿದೆ. ದಸರಾ, ನವರಾತ್ರಿ ಉತ್ಸವದಲ್ಲಿ ದೇವಿ ಪುರಾಣ, ಕಾರ್ತೀಕ ಉತ್ಸವ ಸುಮಾರು ಎರಡು ತಿಂಗಳ ಉತ್ಸವ ನಡೆದು ಪಾಲ್ಕಿ ಉತ್ಸವ ನಡೆಯುವುದು.

**ಅಕ್ಕಲಕೋಟೆ ಶರಣರ ಮಠ**

ಪ್ರಾರಂಭದಲ್ಲಿ ರೇವಣಸಿದ್ದ ಶಿವ ಶರಣರು, ನಂತರ ರಾಮಲಿಂಗ ಶಿವಶರಣರು ಇಂದು ಚಿಕ್ಕರೇವಣಸಿದ್ದ ಶಿವಶರಣರು ಇವರು ಮೂರನೇ ತಲೆಮಾರಿನವರಾಗಿದ್ದಾರೆ. ಈ ಮಠದಲ್ಲಿ 153ನೇ ಜಯಂತಿ ಉತ್ಸವ ನಡೆಯಲಿದೆ. ಗುಳೇದಗುಡ್ಡದಲ್ಲಿ ಪ್ರವಚನಕ್ಕೆ ಅವಕಾಶ ಕಲ್ಪಿಸಿದವರು ಇವರು ಮೊದರಲಿಗರು. ಅಲ್ಲದೆ ಇಂಗ್ಲೀಷ್ ಶಾಲೆ ಮತ್ತು ಸಂಸ್ಕೃತವನ್ನು ಕಲಿಯಲು ಅವಕಾಶ ಮಾಡಿಸಿದವರೇ

ಕಾಡಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ನಂತರದಲ್ಲಿ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠದ ಜವಾಬ್ದಾರಿಯನ್ನು ತೆಗೆದುಕೊಂಡು ಪ್ರಗತಿಗೆ ಕಾರಣರಾದರು.

**ಯಡಹಳ್ಳಿ**

ಹನ್ನೇರಡನೆ ಶತಮಾನದಲ್ಲಿ ಎಡಹಳ್ಳಿಯಲ್ಲಿ 'ಅಡವೀಶ್ವರಮಠ' ಮಠವನ್ನು ಕಾಣಬಹುದಾಗಿದೆ. ಇದು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಇಲ್ಲಿ ಗೃಹಸ್ಥಾಶ್ರಮಕ್ಕೆ ಕಾಲಿಟ್ಟ ಹಲವಾರು ಶ್ರೀಗಳು ಮಠವನ್ನು ಮುನ್ನೇಡಿಸಿಕೊಂಡು ಬಂದಿರುತ್ತಾರೆ. ಶ್ರೀ ವೀರಯ್ಯ ಸ್ವಾಮಿಗಳು, ಶ್ರೀ ಶಿವಯ್ಯ ಸ್ವಾಮಿಗಳು, ಶ್ರೀ ಚಂದ್ರಶೇಖರ ಸ್ವಾಮಿಗಳು ಆಗಿದ್ದಾರೆಂದು ತಿಳಿದು ಬಂದಿದೆ.

**ಕಸಬಾಜಂಬಿಗೆ**

ಕಸಬಾಜಂಬಿಗೆಯಲ್ಲಿ 'ಹಿರೇಮಠ'ವನ್ನು ಶ್ರೀ ಗುರಪ್ಪಯ್ಯ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ತಿಳಿದು ಬಂದಿದೆ. ಇದು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಇಲ್ಲಿ ಐದು ಜನ ಶ್ರೀಗಳು ಅಧಿಕಾರ ವಹಿಸಿಕೊಂಡು ಶ್ರೀ ಮಠದ ಏಳ್ಗೆಗೆ ದುಡಿದಿದ್ದಾರೆ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಮುಮಿ ಶಿವಾಚಾರ್ಯ ಸ್ವಾಮಿಗಳು ಆಗಿದ್ದಾರೆ. ಮಠದಲ್ಲಿ ಪುಣ್ಯಾರಾಧನೆ, ಪುರಾಣ ಮುಂತಾದವುಗಳನ್ನು ಪ್ರತಿ ವರ್ಷ ನಡೆಸುತ್ತಾ ಬಂದಿರುತ್ತಾರೆ.

**ನಾಗರಾಳ**

ನಾಗರಾಳಿನಲ್ಲಿ 'ಅಂಬಿಗರ ಚೌಡಯ್ಯನಮಠ'ವನ್ನು ಕಾಣಬಹುದಾಗಿದೆ. ಶ್ರೀ ಬಸವಲಿಂಗ ಸ್ವಾಮಿಗಳು 1988 ರಲ್ಲಿ ಶ್ರೀಮಠವನ್ನು ಸ್ಥಾಪನೆ ಮಾಡಿದ್ದಾರೆಂದು ತಿಳಿದು ಬಂದಿದೆ.

**ಮಹಾಲಿಂಗಪುರ**

ಮಹಾಲಿಂಗಪುರದಲ್ಲಿ ಶ್ರೀ ಮಹಾಲಿಂಗೇಶ್ವರಮಠ ಹಾಗೂ ನೀಲಕಂಠೇಶ್ವರ ಮಠಗಳನ್ನು ಕಾಣಬಹುದುದಾಗಿದೆ. ಈ ಪಟ್ಟಣಕ್ಕೆ 'ನರಗಟ್ಟಿ' ಎಂಬ ಹೆಸರು ಇತ್ತು. ಶ್ರೀ ಮಹಾಲಿಂಗೇಶ್ವರರು ಸಂಚಾರ ಮಾಡುತ್ತಾ ಈ ಪ್ರದೇಶಕ್ಕೆ ನೆಲೆ ನಂತು ಈ ಸ್ಥಳಕ್ಕೆ 'ಮಹಾಲಿಂಗಪುರ' ಎಂದು ನಾಮಕರಣವಾಯಿತು. ಇವರ ನಂತರದಲ್ಲಿ ಶ್ರೀ ಮಹಾಲಿಂಗೇಶ್ವರ ಶಿವಯೋಗಿ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಮಹಾಲಿಂಗೇಶ್ವರ ಶಿವಯೋಗಿ, ಮಹಾಲಿಂಗಸ್ವಾಮಿಗಳು, ಶ್ರೀ ಮಹಾಲಿಂಗೇಶ್ವರ ಶಿವಯೋಗಿ ಗುರುಲಿಂಗಸ್ವಾಮಿಗಳು, ಶ್ರೀ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಶ್ರೀ ಮಠದಲ್ಲಿ ಏಳು ಗದ್ದುಗೆಗಳನ್ನು ಕಾಣಬಹುದಾಗಿದೆ. ನಿತ್ಯ ಇವುಗಳಿಗೆ ಪೂಜೆ – ಪುನಸ್ಕಾರಗಳು ನಡೆದಿರುತ್ತವೆ. ದಸರಾ ಸಂದರ್ಭದಲ್ಲಿ ಒಂಬತ್ತು ದಿನಗಳವರೆಗೆ ತುಪ್ಪದ ದೀವಿಗೆಯನ್ನು ಉರಿಸಲಾಗುತ್ತದೆ. ಇಲ್ಲಿನ ಜನರು ಭೂಮಿಗೆ ಬಿತ್ತುವ ಪೂರ್ವದಲ್ಲಿ ಜೋಳದ ಸಹಾಯದಿಂದ ಕಿಚಡಿಯನ್ನು ಮಾಡಿ ಅಲ್ಲಿರುವ ಲಿಂಗಗಳಿಗೆ ಪ್ರಸಾದವನ್ನು ಹಿಡಿದು ನಂತರ ತಮ್ಮ ಕೆಲಸಗಳಲ್ಲಿ ತಲ್ಲೀನರಾಗುತ್ತಾರೆ.

**ನೀಲಕಂಠೇಶ್ವರ ಮಠ**

ಹುಬ್ಬಳ್ಳಿಯ ಶ್ರೀ ನೀಲಕಂಠೇಶ್ವರ ಮಠದ ಶಾಖಾಮಠವಾಗಿದೆ. ಶ್ರೀಮಠದಲ್ಲಿ ಪುರಾಣ – ಪ್ರವಚನಗಳು ನಿರಂತರವಾಗಿ ನಡೆಯುತ್ತವೆ.

**ಮುಧೋಳ**

ಬಾದಾಮಿ ಚಾಲುಕ್ಯರ ಆಡಳಿತದ ವ್ಯಾಪ್ತಿಯಲ್ಲಿ ಬರುವ ಮುಧೋಳ ವ್ಯಾಪಾರಕ್ಕೆ, ಸಾಂಸ್ಕೃತಿಕ ರಂಗಗಳಿಗೆ ಹೆಸರುವಾಸಿಯಾಗಿದೆ. ಇಲ್ಲಿ ಜೈನರ ಪ್ರಮುಖ ಸ್ಥಳವಾಗಿತ್ತು. ಕ್ರಮೇಣ ವೀರಶೈವ ಧರ್ಮೀಯರು ಹೆಚ್ಚಾಗತೊಡಗಿದರು. ಆಗ ಇಲ್ಲಿ ಮಠಗಳು ಉದಯವಾದವು.

**ವಿರಕ್ತಮಠ ಶ್ರೀ ಗವಿಮಠ**

ಶ್ರೀ ಬಸವಲಿಂಗ ಸ್ವಾಮಿಗಳು ಮಠದ ಅಧಿಕಾರ ವಹಿಸಿಕೊಂಡ ನಂತರ ಮಠದ ಅಭಿವೃದ್ಧಿ ಕಾರ್ಯಗಳು ನಿರಂತರತೆಯನ್ನು ಪಡೆದವು. ಶ್ರೀಮಠದಲ್ಲಿ ಅನ್ನದಾಸೊಹ, ನಿತ್ಯ ಎರಡು ವೇಳೆ ಪೂಜೆ, ಶಿವಾನುಭವ ಗೋಷ್ಠಿ, ಪ್ರಾರ್ಥನೆ, ಪುರಾಣ, ಜೊತೆಗೆ ಶ್ರೀಮಠವು ಶೈಕ್ಷಣಿಕ ಸೇವೆಯಲ್ಲಿಯೂ ಮುಂದುವರೆದಿದೆ. ಸುಮಾರು ಹತ್ತು ಜನ ಶ್ರೀಗಳು ಮಠದ ಪರಂಪರೆಯಲ್ಲಿ ಕಾಣಬಹುದಾಗಿದೆ.

**ಲೋಕಾಪೂರ**

ಲೋಕಾಪುರದಲ್ಲಿ 'ಹಿರೇಮಠವು' ರಂಭಾಪುರಿ ಪೀಠದ ಶಾಖಾಮಠವಾಗಿದೆ. ಇಲ್ಲಿ ಏಳು ಜನ ಶ್ರೀಗಳು ಅಧಿಕಾರ ವಹಿಸಿಕೊಂಡು ಮಠದ ಏಳ್ಗೆಗೆ ಶ್ರಮಿಸಿದವರು.

**ಬಾದಾಮಿ ತಾಲೂಕು**

ಚಾಲುಕ್ಯರ ರಾಜಧಾನಿಯಾದ 'ಬಾದಾಮಿ'ಯು ಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಇಲ್ಲಿನ ಜನ ಮಾತೃಹೃದಯದವರು. ಪಂಡಿತರು, ಕವಿಗಳು, ಕಲಾವಿಧರು ಬಹುಸಂಖ್ಯೆಯಲ್ಲಿ ಇಲ್ಲಿ ದೊರೆಯುತ್ತಾರೆ. ಜೊತೆಗೆ ಧಾರ್ಮಿಕ ಕ್ಷೇತ್ರದಲ್ಲಿ ಹೆಸರಾದ ತಾಲೂಕು ಇದಾಗಿದೆ. ಇಲ್ಲಿರುವ ಮಠಗಳು ಹಲವಾರು ವರ್ಷಗಳಿಂದ ರೂಪತಾಳಿದವುಗಳು.

**ಶಿವಯೋಗ ಮಂದಿರ**

ಶ್ರೀ ಶಿವಕುಮಾರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸುವುದರೊಂದಿಗೆ 'ಶಿವಯೋಗ ಮಂದಿರ' ಎಂಬ ಹೆಸರು ಬಂದಿತ್ತು. ನಾಡಿನ ಹಲವಾರು ಧರ್ಮಗಳ ಮಠಕ್ಕೆ ಇಲ್ಲಿನ ಉತ್ತರಾಧಿಕಾರಿ ಅಂದರೆ ವಟುಗಳನ್ನು ನಿರ್ಮಾಣ ಮಾಡಿ ವೇದ, ಪುರಾಣ ಮುಂತಾದವುಗಳನ್ನು ಸಮಗ್ರವಾಗಿ ಪಠಿಸಿ ಹಲವಾರೂ ಮಠಗಳಿಗೆ ಚುಕ್ಕಾಣಿಯನ್ನು ಹಿಡಿಯಲು ಸಮರ್ಥ ಶ್ರೀಗಳನ್ನು ತಯಾರು ಮಾಡುವ ಮಠ ಶಿವಯೋಗ ಮಂದಿರವಾಗಿದೆ. ಇಲ್ಲಿ ಪ್ರತಿವರ್ಷ ವಿಶೇಷ ಪೂಜೆ ಪುನಸ್ಕಾರಗಳು ನಾಡಿನ ವಿವಿಧ ಮೂಲೆಗಳಿಂದ ಅಪಾರ ಭಕ್ತರು ಇಲ್ಲಿಗೆ ಬಂದು ದೇವರ ದರ್ಶನ ಪಡೆದು ಪುನಿತರಾಗುತ್ತಾರೆ.

**ಕೆರೂರ**

ಕೆರೂರು ಪಟ್ಟಣದಲ್ಲಿ ಶ್ರೀ ವಿರಕ್ತ ಮಠ ಶ್ರೀ ಚರಂತಿಮಠ, ಇವುಗಳನ್ನು ಕಾಣಬಹುದಾಗಿದೆ.

**ವಿರಕ್ತಮಠ**

ಕೆರೂರು ನಗರದಲ್ಲಿ ಇದು ಮಧ್ಯಭಾಗದಲ್ಲಿ ಬರುತ್ತದೆ. ಹನ್ನೇರಡನೆ ಶತಮಾನದಲ್ಲಿ ಇದು ಸ್ಥಾಪನೆಯಾಯಿತ್ತೆಂದು ತಿಳಿದು ಬರುತ್ತದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಠದ ಜವಾಬ್ದಾರಿಯನ್ನು ವಹಿಸಿ ನಿರಂತರವಾಗಿ ಮಠದಲ್ಲಿ ಪೂಜೆ, ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ.

ರೇವಣಸಿದ್ಧ ಶಿವರಶರಣರು, ಯುಗಾದಿ ಆದ ನಂತರ ಮೂರು ದಿನದ ಸಪ್ತಾಹವನ್ನು ಮಾಡುತ್ತಾರೆ. ಈ ಮಠದ ಉದ್ದೇಶ ಅದ್ವೈತ ತತ್ವಗಳ ಪ್ರಚಾರ, ಭಕ್ತರಲ್ಲಿ ಭಗವಂತನ ಕಾಣಬೇಕು ದಾಸೋಹ ಸೇವೆ ನಡೆಯಬೇಕು ಜ್ಞಾನ ದಾಸೋಹವನ್ನು ನೀಡುವುದಾಗಿದೆ.

**ರಾಘವೇಂದ್ರ ಮಠ**

ಬ್ರಾಹ್ಮಣರ ಆರಾಧ್ಯ ದೈವವಾದ ರಾಘವೇಂದ್ರ ಮಹಾಸ್ವಾಮಿಗಳ ಮಠವೂ ಜೌ ಬಜಾರಿನಲ್ಲಿದ್ದು 1984 ಅಕ್ಟೋಬರ್ 31ರಲ್ಲಿ ಪ್ರಾರಂಭವಾಗಿದೆ ಸುಶೀಲೇಂದ್ರತೀರ್ಥ ಶ್ರೀಪಾದಂಗಳು ಮಂತ್ರಾಲಯ ಇವರು ಮಠದ ರೂವಾರಿಯಾಗಿದ್ದರು. ಈ ಮಠದ ಮೂಲ ಸಂಸ್ಥಾಪಕರಾದ ಎಚ್.ಆರ್.ಬಸವರಾಜ ಶ್ರೀ ನಾದಯೋಗಿ ಡಿ. ಆರ್. ಪರ್ವತಿಕರ ಅವರಾಗಿದ್ದರು. ಇದೇ ಮಠದ ಹತ್ತಿರ ಬರುವ ಇನ್ನೊಂದು ಮಠ ವಾಜೇಂದ್ರ ತೀರ್ಥ ಮಠವನ್ನು ಸಹ ಕಾಣಬಹುದಾಗಿದೆ. ಇದೊಂದು ಗುಳೇದಗುಡ್ಡದ ರಾಯರ ಮಠದ ಒಂದು ವೈಶಿಷ್ಟ್ಯ. ಇಲ್ಲಿ ಆರಾದಣ ಉತ್ಸವ, ಪುರಂದರದಾಸರ ಪುಣ್ಯತಿಥಿ, ಪ್ರತಿ ವರ್ಷ ದೀಪಾವಳಿಯ ಸಂದರ್ಭದಲ್ಲಿ ನಾದಯೋಗಿ ಡಿ. ಆರ್. ಪರ್ವತಿಕರರ ಪುಣ್ಯ ಸ್ಮರಣೆ ಹಾಗೂ ಸ್ವರಾಂಜಲಿ ಕಾರ್ಯಕ್ರಮ ನೆರವೇರಿಸುತಿದ್ದಾರೆ.

**ಒಪ್ಪತ್ತೇಶ್ವರ ಮಠ**

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನೆಲೆಸಿದ್ದ ಶರಣರಲ್ಲಿ ಶ್ರೀ ಒಪ್ಪತ್ತೇಶ್ವರರು ಒಬ್ಬರು ವಿರಕ್ತ ಸಂಪ್ರದಾಯದಲ್ಲಿ ಈ ಮಠವು ಸ್ಥಾಪಣೆಯಾಗಿದೆ. ಮೊದಲು ಶ್ರೀ ಮ.ನಿ.ಪ್ರ ಒಪ್ಪತ್ತೇಶ್ವರ ಮಹಾಸ್ವಾಮಿಗಳಿಂದ ಪ್ರಾರಂಭವಾಗಿ, ಶ್ರೀ ಮ.ನಿ.ಪ್ರ. ಅಭಿನವ ಒಪ್ಪತ್ತೇಶ್ವರ ಮಹಾಸ್ವಾಮಿಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಧಾರ್ಮಿಕ ಕಾರ್ಯಗಳ ಜೊತೆಗೆ ಶೈಕ್ಷಣಿಕ ಪರಂಪರೆಯನ್ನು ಹಾಕಿಕೊಂಡು ಬಂದಿರುತ್ತಾರೆ. ಈ ಮಠದಲ್ಲಿ ಹತ್ತು ಗುದ್ದುಗೆಗಳಿದ್ದು ನಿತ್ಯ ಪೂಜೆ, ಪುನಸ್ಕಾರಗಳು ನಡೆಯತ್ತವೆ. ಪ್ರತಿ ವರ್ಷ ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳನ್ನು ಹಚ್ಚಿರುತ್ತಾರೆ. ಇಲ್ಲಿಯೂ ಸಹಿತ ಪ್ರಾಥಮಿಕದಿಂದ ಹಿಡಿದು ಕಾಲೇಜು ಮಟ್ಟದವರೆಗೆ ಶಿಕ್ಷಣ ಕೇಂದ್ರಗಳನ್ನು ನಿರ್ಮಾಣ ಮಾಡಿದ್ದಾರೆ.

ಗುಳೇದಗುಡ್ಡದಲ್ಲಿ ಮಾರ್ವಾಡಿ ಬಾಂದವರು ನೆಲೆಸಿದ್ದಾರೆ. ಇವರು ಮಾಹೇಶ್ವರಿ ಜನಾಂಗದರಾಗಿದ್ದಾರೆ. ಸುಮಾರು 150ಕ್ಕೂ ಮಿಕ್ಕ ಕುಟುಂಬಗಳು ಗುಳೇದಗುಡ್ಡದಲ್ಲಿವೆ. ಇವರು ಎಲ್ಲಾ ಧರ್ಮದ ಬಾಂಧವರ ಜೊತೆಗೆ ಒಳ್ಳೆಯ ಬಾಂಧವ್ಯಗಳನ್ನಟ್ಟುಕೊಂಡಿರುವರು. ಇವರು ಪೂಜಿಸುವ ಬಾಲಾಜಿ ಗುಡಿ ಹಾಗೂ ಜಗನ್ನಾಥ ದೇವಾಲಯಗಳನ್ನು ನಗರದಲ್ಲಿ ಕಾಣಬಹುದಾಗಿದೆ.

**ಬಾಲಾಜಿ ಗುಡಿ**

ಬಾಲಾಜಿ ಗುಡಿಯು ಸುಮಾರು 122 ವರ್ಷದ ಪುರಾತನ ಕಾಲದ್ದಾಗಿದೆ. ಮೂಲತಃ ಅಯೋಧ್ಯದಿಂದ ಹಲವಾರು ಸನ್ಯಾಸಿಗಳು ಬಂದು ನೆಲೆಸಿದ್ದರು. ಅಂತಹವರಲ್ಲಿ ಮೊದಲಿಗರಾಗಿ ರಘುನಾಥದಾಸ ಬಾಬಾ ಅವರು ಈ ದೇವಾಲಯದ ಸ್ಥಾಪನೆಯಲ್ಲಿ ಶ್ರಮಿಸಿದವರು. ಈ ಗುಡಿಯಲ್ಲಿ ರಾಮ, ಲಕ್ಷ್ಮಣ, ಸೀತಾ ದೇವರುಗಳ ಪೂಜೆ ನರಂತರವಾಗಿ ನಡೆಸುತ್ತಾ ಬಂದುರುತ್ತಾರೆ. ಗುಡಿಯ ಪರಂಪರೆಯನ್ನು ನೋಡಿದಾಗ ಶ್ರಾವಣ ಮಾಸದಲ್ಲಿ ಜುಲೋಸ್ತಾವ ಪೂಜೆ ಮಾಡುವುದರ ಜೊತೆಗೆ ದೀಪಾವಳಿಯ ಸಮಯದಲ್ಲಿ 105 ಸಾಮಗ್ರಿಗಳ ಪೂಜೆ ನೈವೇದ್ಯವನ್ನು ಮಾಡುತ್ತಾರೆ. ಇಲ್ಲಿ ಪ್ರಾರಂಭದಿಂದ ಹಿಡಿದು ಇಂದಿನವರೆಗೂ ಪ್ರಜ್ವಲಿಸುವ ಅಗ್ನಿಕುಂಡವನ್ನು ಕಾಣಬಹುದು.

**ಜಗನ್ನಾಥ ದೇವಾಲಯ**

ರಾಧಾಕೃಷ್ಣ ಜಗನ್ನಾಥ ಸ್ವಾಮಿ ದೇವಾಲಯವು ನೂರು ವರ್ಷಗಳ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಈ ಗುಡಿಯಲ್ಲಿ ಗೃಹಸ್ಥಾಶ್ರಮಕ್ಕೆ ಕಾಲಿಟ್ಟವರು ಪೂಜೆ ಪುನಸ್ಕಾರಗಳನ್ನು ಮಾಡುತ್ತಿರುತ್ತಾರೆ. ರಾಮನವಮಿ, ಕೃಷ್ಣ ಜನ್ಮಾಷ್ಟಮಿ, ಹಲವಾರು ಉತ್ಸವಗಳನ್ನು ಇಲ್ಲಿ ಆಚರಿಸುತ್ತಾ ಬಂದಿರುತ್ತಾರೆ. ಇದನ್ನು ಸಹ ಮಾಹೇಶ್ವರಿ ಜನಾಂಗದವರು ನಡೆಸಿಕೊಂಡು ಬಂದಿರುತ್ತಾರೆ. ಈ ಗುಡಿಯ ಬಗ್ಗೆ ಹಲವಾರು ಪವಾಡಗಳನ್ನು ನಾವು ಕಾಣಬಹುದಾಗಿದೆ. ಭಕ್ತರ ಇಷ್ಟಾರ್ಥಗಳನ್ನು ನೆರವೆಸುವುದಕ್ಕಾಗಿ ಅಟಕಾ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಅಟಕಾ ಎಂದರೆ ಒಡೆಯುವುದು ಎಂದರ್ಥ. ಮಣ್ಣಿನಿಂದ ತಯಾರಿಸಿದ ಪಾತ್ರೆಯಲ್ಲಿ ಅನ್ನವನ್ನು ಹಾಕಿ ಕುದಿಸಿ ನಂತರ ದೇವರ ಮುಂದೆ ಇಟ್ಟಾಗ ಅದು ಸರಿಯಾಗಿ ನಾಲ್ಕು ಸಮ ಭಾಗವಾಗಿ ಒಡೆಯುವುದು. ಇಂತಹ ಅಪರೂಪದ ಪವಾಡ ಕಾಣಬಹುದಾಗಿದೆ. ಮಾಹೇಶ್ವರಿ ಜನಾಂಗದವರು ಈ ಎರಡು ಗುಡಿಗಳನ್ನು ನೋಡುವುದರ ಜೊತೆಗೆ ಗೋಶಾಲೆ ಮಾಹೇಶ್ವರಿ ವಿದ್ಯಾಪ್ರಚಾರಕ ಮಂಡಳಿ, ಹೆರಿಗೆ ಆಸ್ಪತ್ರೆ ಮುಂತಾದವುಗಳನ್ನು ಸರಕಾರದ ಅನುದಾನವಿಲ್ಲದೇ ನಡೆಸಿಕೊಂಡು ಬಂದಿರುತ್ತಾರೆ. ಇಂತಹ ಮಾರ್ವಾಡಿ ಜನಾಂಗದವರು ಹೆಚ್ಚಾಗಿ ಇರುವುದರಿಂದ ಎರಡನೇ ರಾಜಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಇವರು ಮೊದಲ ಬಾರಿಗೆ ಗುಳೇದಗುಡ್ಡದಲ್ಲಿ ಎರಡು ಕಲ್ಯಾಣ ಮಂಟಪಗಳನ್ನು ನಿರ್ಮಾಣ ಮಾಡಿರುತ್ತಾರೆ.

**ಹಳೇ ಅಂಭಾಭವಾನಿ ಗುಡಿ**

ಇದು ಸೇಂಟ್ ಝೇವಿಯರ್ಸ್ ಶಾಲೆಯ ಪಕ್ಕದಲ್ಲಿ ಬರುತ್ತದೆ. ಬಹಳ ಪುರಾತನ ಗುಡಿಯಾಗಿದ್ದು ಇಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ.

**ಹೊಸ ಅಂಬಾಭವಾನಿ ಗುಡಿ**

ಗುಳೇದಗುಡ್ಡದಲ್ಲಿ ಸೋಮವಂಶ ಕ್ಷತ್ರೀಯ ಸಮಾಜದ ಬಾಂಧವರು ಸುಮಾರು ನೂರು ವರ್ಷಗಳಿಂದ ಇಲ್ಲಿ ವಾಸವಾಗಿದ್ದಾರೆ. ಇವರ ಗುರುಗಳಾದ ಶ್ರೀಶ್ರೀಶ್ರೀ ಸಹಸ್ರಾರ್ಜುನರು ಸಮಾಜದ ಗುರುಗಳಾಗಿದ್ದರು. ಇವರು ಪೂಜಿಸುವ ದೇವಿ ಅಂಬಾಭವಾನಿಯಾಗಿದ್ದಾಳೆ. ಗುಳೇದಗುಡ್ಡದಲ್ಲಿ ಎರಡು ಅಂಬಾಭವಾನಿ ಗುಡಿಗಳನ್ನು ಕಾಣಬಹುದಾಗಿದೆ.

ಕ್ಷತ್ರೀಯ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಆರಾಧಿಸುತ್ತಾರೆ. ಈ ಗುಡಿಯಲ್ಲಿ ವರ್ಷಕ್ಕೊಮ್ಮೆ ಮಹಾನವಮಿ ಒಂಬತ್ತು ದಿವಸ ಘಟ್ಟ ಸ್ಥಾಪನೆ ಮಾಡಿ ದೇವಿ ಪುರಾಣವನ್ನ ಹಚ್ಚುತ್ತಾರೆ. ಈ ದೇವಾಲಯದಲ್ಲಿ ಸಸ್ಯಾಹಾರಿ ನೈವೇದ್ಯವನ್ನು ಮಾಡುತ್ತಾರೆ. ಒಂಬತ್ತು ದಿವಸಗಳಲ್ಲಿ ನವಶಕ್ತಿಗಳ ವೇಷ ಭೂಷಣಗಳನ್ನು ದೇವಿಗೆ ಅಲಂಕರಿಸುತ್ತಾರೆ.

ಗುಳೇದಗುಡ್ಡದಲ್ಲಿ ಗೊಂದಳಿ ಸಮಾಜದ ಬಾಂಧವರನ್ನು ಸಹ ಕಾಣಬಹುದು. ಸುಮಾರು ನಲ್ವತ್ತು ಕುಟುಂಬಗಳು ಇಂದು ಅಸ್ತಿತ್ವದಲ್ಲಿವೆ. ಇವರು ಹೆಚ್ಚಾಗಿ ದುರ್ಗಾದೇವಿ ಪೂಜೆಯನ್ನು ಮಾಡುತ್ತಾರೆ. ಪ್ರತಿ ವರ್ಷ ಆಷಾಡದಲ್ಲಿ ದೇವಿಯ ಜಾತ್ರೆಯನ್ನು ಮಾಡುತ್ತಾರೆ. ಜೊತೆಗೆ ಪಾಂಡುರಂಗ ವಿಠಲನ ಆರಾಧಕರೂ ಆಗಿರುತ್ತಾರೆ. ಈ ಗುಡಿಗಳು ಹೊಸಪೇಟೆ ಹತ್ತಿರ ಭಜಂತ್ರಿ ಓಣಿಯಲ್ಲಿ, ಹರದೊಳ್ಳಿ ಓಣಿಯ ಹನಮಂತ ದೇವರ ಗುಡಿಯಲ್ಲಿ, ಸರಾಫ್ ಬಜಾರದಲ್ಲಿ ಸಹ ಗುಡಿಯನ್ನು ನೋಡಬಹುದಾಗಿದೆ. ಇಂತಹ ಧಾರ್ಮಿಕ ಪರಂಪರೆಗಳಲ್ಲಿ ಸಿಖ್ಖರು ವಾಸವಾಗಿದ್ದಾರೆಂದು ಇತ್ತೀಚೆಗೆ ತಿಳಿದು ಬಂದಿರುತ್ತದೆ. ಇವರು ಗುರುನಾನಕರ ಜಯಂತಿಯನ್ನು ಆಚರಿಸುತ್ತಾರೆ.

**ರೇಣುಕಾಚಾರ್ಯರ ಮಠ**

ಈ ಮಠವು ಗುಳೇದಗುಡ್ಡದ ವ್ಯಾಪ್ತಿಗೆ ಒಳಪಟ್ಟಿದ್ದು ಸುಂದರ ವಾತಾವರಣದಿಂದ ಕೂಡಿರುವ ಈ ಮಠದಲ್ಲಿ ಶ್ರೀ ರೇಣುಕಾಚಾರ್ಯ ದೇವರನ್ನು ಪೂಜಿಸಲಾಗುತ್ತದೆ. ಇಲ್ಲಿ ಹಲವಾರು ಜನರ ಶುಭ ವಿವಾಹದ ಕಲ್ಯಾಣ ಕಾರ್ಯದ ಕಲ್ಯಾಣ ಮಂಟಪವನ್ನು ಹೊಂದಿದೆ. ಇಂತಹ ಹಲವಾರು ಮಠಗಳು ತನುಮನ ಧನದಿಂದ ಜನರಿಗೆ ಮಹದುಪಕಾರಗಳನ್ನು ಮಾಡಿವೆ. ಕಲೆ, ಸಾಹಿತ್ಯ, ಸಂಸ್ಕೃತಿ, ಧಾರ್ಮಿಕ ಪರಿಸರ ಮುಂತಾದುವುಗಳನ್ನು ಮೈಗೂಡಿಸಿಕೊಂಡು ಬಂದಿವೆ. ಇಂತಹ ಹಲವಾರು ಮಠಗಳ ಜಾತ್ರೆ, ಉತ್ಸವಗಳನ್ನು ಭಕ್ತರು ಪ್ರತಿ ವರುಷ ಮಾಡುತ್ತ ಬಂದಿರುವುದು ಸಂತೋಷದ ಸಂಗತಿ. ಅಂತವುಗಳಲ್ಲಿ

**ಹೊಳೆ ಹುಚ್ಚೇಶ್ವರ ಮಠ**

ಗುಳೇದಗುಡ್ಡ ಸಮೀಪದಲ್ಲಿರುವ ಕೋಟೆಕಲ್ ಗ್ರಾಮದಲ್ಲಿ ಶ್ರೀ ಹೊಳೆ ಹುಚ್ಚೇಶ್ವರ ಮಠದ ಜಾತ್ರೆ ಜರುಗುವುದು. ಪ್ರಕೃತಿಯ ಮಡಿಲಲ್ಲಿ ವಿಶಾಲವಾದ ಮೈದಾನದಲ್ಲಿ ಈ ದೇವಾಲಯವು ನಿರ್ಮಾಣಗೊಂಡಿದೆ. ಜಾತ್ರೆಯ ದಿನ ಮುಂಜಾನೆ ದೇವರಿಗೆ ಪೂಜೆಯನ್ನು ಮಾಡಿ ಅಭಿಷೇಕವನ್ನು ಮಾಡುತ್ತಾರೆ. ಹಲವಾರು ಊರಿನಿಂದ ಭಕ್ತಾದಿಗಳು ಆಗಮಿಸಿ ದೇವರ ದರ್ಶನವನ್ನು ಪಡೆದು ಪುಣೀತರಾಗುತ್ತಾರೆ. ನಂತರ ಎಲ್ಲರೂ ತಮ್ಮ-ತಮ್ಮ ಮನೆಗಳಲ್ಲಿ ಸಿಹಿ ಭೋಜನವನ್ನು ಸೇವಿಸಿ ಸಂಜೆಯಾಗುತ್ತಿದ್ದಂತೆ ಜಾತ್ರೆಯು ದೇವಾಲಯದ ಆವರಣದಲ್ಲಿ ದಗದಗಿಸುವ ಉರಿಯುವ ಪಂಜನ್ನು ಹಿಡಿದುಕೊಂಡು ತೇರಿನ ಮುಂಭಾಗದಲ್ಲಿ ಬಂದು ತೇರನ್ನು ಎಳೆಯುತ್ತಾರೆ. ಭಕ್ತರು ತೇರಿಗೆ ಉತ್ತತ್ತಿಯನ್ನು ಎಸೆದು ಸಂಭ್ರಮ ಪಡುತ್ತಾರೆ. ಮರುದಿನ ಅಗ್ಗಿಯನ್ನು ಹಾರುವುದರ ಮೂಲಕ ತಮ್ಮ ಎಲ್ಲ ಕಷ್ಟಗಳು ಪರಿಹಾರವಾದವೆಂದು ನಂಬುತ್ತಾರೆ. ಈ ಮಠದ ಪರಂಪರೆ ಹಾಗೂ ನೆಲೆಯ ಇತಿಹಾಸದ ಬಗ್ಗೆ ಕಾಣಬಹುದಾಗಿದೆ. ಕೋಟೆಕಲ್ ಮಠವು ಗುಳೇದಗುಡ್ಡಕ್ಕೆ ಹತ್ತಿರವಾಗಿದ್ದರಿಂದ ಇಲ್ಲಿಯ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಮಠಕ್ಕೆ ನಡೆದುಕೊಳ್ಳುತ್ತಾರೆ. ಈ ಮಠದ ಐತಿಹ್ಯ ಮತ್ತು ಪರಂಪರೆ ಕುರಿತು ನಾಟಕಗಳು ರಚನೆಗೊಂಡು ಪ್ರಯೋಗಗೊಂಡಿವೆ.

ಸಾಹಿತ್ಯ, ಸಂಸ್ಕೃತಿ, ಕಲೆ-ವಾಸ್ತುಶಿಲ್ಪ, ಧಾರ್ಮಿಕ ಕ್ಷೇತ್ರಗಳು, ಮಠಮಾನ್ಯಗಳು, ನದಿ ಕೊಳಗಳು ಮುಂತಾದವುಗಳಿಗೆ ಹೆಸರುವಾಸಿಯಾದ ಬಾಗಲಕೋಟ ಜಿಲ್ಲೆ ಇಂದು ಮುಳುಗಡೆಯಾಗಿ ಹೊಸ ಬಾಗಲಕೋಟ ಆಗಿ ಹೊಸ-ಹೊಸ ವಿಚಾರಧಾರೆಗಳನ್ನು ಈ ಜಿಲ್ಲೆಯಿಂದ ನಾವು ಕಾಣುತ್ತೇವೆ. ಈ ಲೇಖನದಲ್ಲಿ ನಾಡಿನ ಹಲವಾರು ವಿದ್ವಾಂಸರ ಅಭಿಪ್ರಾಯ, ಸ್ವಾಮಿಗಳ ಸಂದರ್ಶನ, ಶ್ರೀ ಚಂದ್ರಶೇಖರ ನಾರಾಣಾಪುರ ಅವರ ಕರ್ನಾಟಕದ 'ವೀರಶೈವ ಮಠಗಳು' ಎಂಬ ಪುಸ್ತಕ ಡಾ. ವಿಜಯಕುಮಾರ ಕಟಗಿಹಳ್ಳಿಮಠ ಅವರ 'ವೀರಶೈವ ಮಠಗಳು' ಅಲ್ಲದೆ ಹಲವಾರು ಲೇಖನಗಳನ್ನು ಬಳಸಿ ಈ ಲೇಖನ ತಯಾರಿಸಿರುವೆ. ಕೆಲವು ಮಠಗಳು ಈ ಲೇಖನದಿಂದ ವಿವರಣೆಗೆ ಒಳಗಾಗಿಲ್ಲ. ಇನ್ನೂ ಕೆಲವು ಮಠಗಳ ಹೆಸರುಗಳು ಸೇರ್ಪಡೆಯಾಗಬೇಕಿದೆ. ಒಟ್ಟಾರೆಯಾಗಿ ಬಾಗಲಕೋಟ ಜಿಲ್ಲೆಯ ಮಠಗಳು ಮಹತ್ವತೆಯನ್ನು ಪಡೆದುಕೊಂಡಿವೆ.